# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಜನವರಿ 03, 2022

ಸಂಪುಟ : 48 ಸಂಚಿಕೆ : 233 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




# ಶಿಕ್ಷಕರಲ್ಲಿದೆ ವ್ಯಕ್ತಿತ್ವ ಬದಲಿಸುವ ಶಕ್ತಿ

## ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ

**ಜಿಲ್ಲೆ ಸಮಾಚಾರ ದಿನಪತ್ರಿಕೆ ಬಳಗದಿಂದ ಜಸ್ಟಿನ್ ಡಿಸೌಜ ಅವರಿಗೆ ವರ್ಷದ ವ್ಯಕ್ತಿ ಪ್ರಶಸ್ತಿ ಪ್ರದಾನ**

ದಾವಣಗೆರೆ, ಜ.2- ವ್ಯಕ್ತಿಯ ವ್ಯಕ್ತಿತ್ವವನ್ನೇ ಬದಲಿಸುವ ಶಕ್ತಿ ಶಿಕ್ಷಕರಲ್ಲಿರುತ್ತದೆ ಎಂದು ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ ಹೇಳಿದರು.

'ಜಿಲ್ಲೆ ಸಮಾಚಾರ' ದಿನಪತ್ರಿಕೆ ಬಳಗದಿಂದ ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಆವರಣದಲ್ಲಿ '2021ರ 'ವರ್ಷದ ವ್ಯಕ್ತಿ' ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ತಂದೆ-ತಾಯಿಗಿಂತ ಗುರು ಶ್ರೇಷ್ಠ. ಅಲೆಗ್ಸಾಂಡರ್ ಜಗತ್ತನ್ನೇ ಗೆಲ್ಲಲು ಪ್ರೇರಕ ಶಕ್ತಿಯಾಗಿದ್ದ ಅವನ ಗುರು ಅರಿಸ್ಟಾಟಲ್. ಸ್ವಾಮಿ ವಿವೇಕಾನಂದರಿಗೆ ಗುರು ರಾಮಕೃಷ್ಣ ಪರಮಹಂಸರು, ಸಂತ ಶಿಶುನಾಳ ಶರೀಫರಿಗೆ, ಕಬೀರರಿಗೆ ಅವರ ಗುರುಗಳೇ ಪ್ರೇರಕರಾಗಿದ್ದರು ಎಂದು ಉದಾಹರಿಸಿದರು.

ಪ್ರತಿಯೊಬ್ಬರಲ್ಲೂ ವಿಶೇಷ ಶಕ್ತಿ ಇರುತ್ತದೆ. ಅದನ್ನು ಗುರುತಿಸಿ, ಪ್ರೋತ್ಸಾಹಿಸುವುದು ಪೋಷಕರು ಹಾಗೂ ಶಿಕ್ಷಕರ ಕರ್ತವ್ಯ. ತಮ್ಮ ಮಕ್ಕಳು ಎಂಜಿನಿಯರ್, ಡಾಕ್ಟರ್, ಐಎಎಸ್ ಓದಬೇಕೆಂದು ಪೋಷಕರೇ ನಿರ್ಧರಿಸುವ ಬದಲು ಮಕ್ಕಳಲ್ಲಿನ ಪ್ರತಿಭೆ ಗುರುತಿಸಬೇಕು ಎಂದು ಕಿವಿ ಮಾತು ಹೇಳಿದರು.

ಸಮಯ ಸಾಧಕರು ಬಹಳ ಜನ ಸಿಗುತ್ತಾರೆ. ಆದರೆ ನಿಜವಾದ ಸಾಧಕರು ಸಿಗುವುದು ವಿರಳ. ನಿಜ ಸಾಧಕರ ಪೈಕಿ ಜಸ್ಟಿನ್ ಡಿಸೌಜ ಒಬ್ಬರು. ಅವರು ನಿಸ್ವಾರ್ಥ ಸೇವೆಯಿಂದ ಸಂಸ್ಥೆ ಕಟ್ಟಿದವರು. ಜಿಲ್ಲಾ ಸಮಾಚಾರ ಬಳಗ ಉತ್ತಮ ಸಾಧಕರನ್ನು ಗುರುತಿಸಿ ಶ್ರೇಷ್ಠ ಕೆಲಸ ಮಾಡಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಸಾಧಕರು ಯಾವತ್ತೂ ಅರ್ಜಿ ಹಿಡಿದುಕೊಂಡು ಹೋಗಬಾರದು. ಸಂಘ-ಸಂಸ್ಥೆಗಳೇ ನಿಜವಾದ ಸಾಧಕರನ್ನು ಹುಡುಕಿ ಪ್ರಶಸ್ತಿ ನೀಡಿದರೆ ಅದೇ ನಿಜವಾದ ಸಾಧಕರಿಗೆ ತೋರಿಸುವ ಗೌರವ ಎಂದು ಜೋಶಿ, ಸಾಧಕರು ಅಕ್ಕಪಕ್ಕದವರ ಗೇಲಿಯನ್ನೇ ಎದುರಿಸಬೇಕಾಗುತ್ತದೆ. ಅದನ್ನು ಮೆಟ್ಟಿ ಮುಂದೆ ಸಾಗಿದರೆ ನಂತರ ಸಾಧನೆ ಕಂಡು ಅವರೇ ಹೊಗಳಲಾರಂಭಿಸುತ್ತಾರೆ. ಸಾಧಕನಿಗೆ ಮತ್ತಷ್ಟು ಸಾಧನೆ ಮಾಡುವ ತುಡಿತ ಇರುತ್ತದೆ ಎಂದು ಹೇಳಿದರು.

ವರ್ಷದ ವ್ಯಕ್ತಿ ಪ್ರಶಸ್ತಿ ಸ್ವೀಕರಿಸಿದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಮುಖ್ಯಸ್ಥೆ ಶ್ರೀಮತಿ ಜಸ್ಟಿನ್ ಡಿಸೌಜ ಮಾತನಾಡುತ್ತಾ, ಪ್ರಶಸ್ತಿಯನ್ನು ಸಂಸ್ಥೆಗೆ ಅರ್ಪಿಸುವುದಾಗಿ ಹೇಳಿದರು.

ಸರ್ಕಾರದ ಅನುದಾನವಿಲ್ಲದೆ ನಡೆಯುತ್ತಿರುವ ಸಂಸ್ಥೆಯನ್ನು ಪೋಷಕರೇ ಮುನ್ನಡೆಸುತ್ತಿದ್ದಾರೆ. ಬೋಧಕರು, ಬೋಧಕೇತರ ವರ್ಗದವರ ಶ್ರಮ ಸಂಸ್ಥೆಯ ಪ್ರಗತಿಗೆ ಕಾರಣವಾಗಿದೆ. ತಮ್ಮ ಮೂವರು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳೂ ಸಹ ಸಂಸ್ಥೆಯ ಏಳ್ಗೆಯಲ್ಲಿ ಕೈ ಜೋಡಿಸುತ್ತಿದ್ದಾರೆ ಎಂದು ಹೇಳಿದರು.

ಸಿದ್ಧಗಂಗಾ ಶ್ರೀಗಳ ಹೆಸರಿಗೆ ಚ್ಯುತಿ ಬಾರದಂತೆ ಸಂಸ್ಥೆಯನ್ನು ಮುನ್ನಡೆಸಬೇಕೆಂದು ಸಂಸ್ಥೆಯ ಸಂಸ್ಥಾಪಕ ಶಿವಣ್ಣನವರು ಹೇಳಿದ್ದರು. ಅವರು ಹೇಳಿದಂತೆ ನಡೆದುಕೊಂಡು ಬಂದಿದ್ದೇವೆ. ಸಿದ್ಧಗಂಗಾ ಎನ್ನುವುದು (2ನೇ ಪುಟಕ್ಕೆ)

# ಓಮಿಕ್ರಾನ್ ಶ್ವಾಸಕೋಶಕ್ಕೆ ಹಾನಿ ತರುವ ಸಾಧ್ಯತೆ ಕಡಿಮೆ

**ಗಂಟಲಿನಲ್ಲೇ ಹೆಚ್ಚು ಸೋಂಕಾಗುವುದರಿಂದ ಹರಡುವಿಕೆ ಹೆಚ್ಚು : ವಿಜ್ಞಾನಿಗಳ ವರದಿ**

ವಾಷಿಂಗ್ಟನ್, ಜ. 2- ಓಮಿಕ್ರಾನ್ ರೂಪಾಂತರಿ ಶ್ವಾಸಕೋಶಕ್ಕಿಂತ ಗಂಟಲಿಗೆ ಸೋಂಕು ತರುವ ಸಾಧ್ಯತೆ ಹೆಚ್ಚಾಗಿದೆ. ಇದರಿಂದಾಗಿಯೇ ಕೊರೊನಾದ ಇತರೆ ರೂಪಾಂತರಿಗಳಿಗಿಂತ ಓಮಿಕ್ರಾನ್ ಕಡಿಮೆ ತೀವ್ರತೆ ಹೊಂದಿದೆ ಎಂದು ವಿಜ್ಞಾನಿಗಳು ನಡೆಸಿರುವ ಅಧ್ಯಯನ ತಿಳಿಸಿದೆ.

ಕ್ರಿಸ್‌ಮಸ್‌ಗೆ ಮುಂಚೆ ಆರು ಅಧ್ಯಯನಗಳನ್ನು ನಡೆಸಲಾಗಿದ್ದು, ಇವುಗಳಲ್ಲಿ ನಾಲ್ಕನ್ನು ಪ್ರಕಟಿಸಲಾಗಿದೆ. ಡೆಲ್ಟಾ ಹಾಗೂ ಇತರೆ ಹಿಂದಿನ ರೂಪಾಂತರಿಗಳಿಗೆ ಹೋಲಿಸಿದರೆ ಓಮಿಕ್ರಾನ್ ಕಾರಣದಿಂದಾಗಿ ಶ್ವಾಸಕೋಶಕ್ಕೆ ಆಗಿರುವ ಹಾನಿ ಕಡಿಮೆ ಎಂದು ತಿಳಿಸಲಾಗಿದೆ.

ಓಮಿಕ್ರಾನ್ ಜೀವಕಣಗಳಿಗೆ ಅಂಟಿಕೊಳ್ಳುವ ರೀತಿ ಬೇರೆ ರೂಪಾಂತರಿಗಳಿಗಿಂತ ಭಿನ್ನವಾಗಿದೆ. ಇದು ಓಮಿಕ್ರಾನ್ ಬೇರೆ ರೀತಿಯ ರೂಪಾಂತರಿ ಆಗುವಂತೆ ಮಾಡಿದೆ ಎಂದು ಯೂನಿವರ್ಸಿಟಿ ಆಫ್ ಲಂಡನ್‌ನ ವೈರಾಲಜಿ ಉಪನ್ಯಾಸಕ ದೀನನ್ ಪಿಳ್ಳೈ ಹೇಳಿದ್ದಾರೆ.

ಓಮಿಕ್ರಾನ್ ಗಂಟಲಿನ ಮೇಲ್ಭಾಗಕ್ಕೆ ಸೋಂಕು ತರುತ್ತದೆ. ಶ್ವಾಸಕೋಶಕ್ಕಿಂತ ಗಂಟಲಿನ ಭಾಗದಲ್ಲೇ ಸೋಂಕು ಹೆಚ್ಚಾಗಿರುತ್ತದೆ. ಇದು ಆರಂಭಿಕ ಅಧ್ಯಯನವಾದರೂ, ಸೋಂಕಿನ ಸ್ವರೂಪದ ಬಗ್ಗೆ ಬೆಳಕು ಚೆಲ್ಲುತ್ತಿದೆ ಎಂದವರು ಹೇಳಿದ್ದಾರೆ.

ವೈರಸ್ ಗಂಟಲಿನಲ್ಲಿ ಹೆಚ್ಚು ಹರಡಿದರೆ ಅದು ಬೇರೆಯವರಿಗೆ ವೇಗವಾಗಿ ಸೋಂಕು ತರುತ್ತದೆ. ಓಮಿಕ್ರಾನ್ ವೇಗವಾಗಿ ಹರಡಲು ಇದೇ ಕಾರಣವಿರಬಹುದು. ಮತ್ತೊಂದೆಡೆ ಶ್ವಾಸಕೋಶಕ್ಕೆ ಸೋಂಕು ಹೆಚ್ಚಿಸುವ ವೈರಸ್ ಹರಡುವುದು ನಿಧಾನವಾದರೂ ಆರೋಗ್ಯಕ್ಕೆ ಹೆಚ್ಚು ಹಾನಿ ತರುತ್ತದೆ.

ಲಿವರ್‌ಪೂಲ್ ವಿಶ್ವವಿದ್ಯಾನಿಲಯದ ಮಾಲಿಕ್ಯುಲರ್ ವೈರಾಲಜಿ ರೀಸರ್ಚ್ ಗ್ರೂಪ್ ಇಲಿಗಳನ್ನು ಬಳಸಿ ಓಮಿಕ್ರಾನ್ ಅಧ್ಯಯನ ಮಾಡಿ ವರದಿಯೊಂದನ್ನು ಪ್ರಕಟಿಸಿದೆ. ಓಮಿಕ್ರಾನ್ ಸೋಂಕಿಗೆ ಗುರಿಯಾದ ಇಲಿಗಳು ತೂಕ ಕಳೆದುಕೊಳ್ಳುವ ಪ್ರಮಾಣ ಕಡಿಮೆ ಹಾಗೂ ವೈರಸ್ ಪ್ರಮಾಣವೂ ಕಡಿಮೆ (2ನೇ ಪುಟಕ್ಕೆ)

## ದಾವಣಗೆರೆಯಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಯುವಂತಾಗಲಿ



ದಾವಣಗೆರೆ, ಜ. 2- ದಾವಣಗೆರೆಯಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಸಬೇಕು ಎಂದು ಈ ಹಿಂದೆ ನಿರ್ಧಾರವಾಗಿತ್ತು. ಕೊರೊನಾ ಪರಿಸ್ಥಿತಿ ಮುಗಿದ ನಂತರ ದಾವಣಗೆರೆಯಲ್ಲಿ ಸಮ್ಮೇಳನ ನಡೆಯಬೇಕಿದೆ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಆಶಯ ವ್ಯಕ್ತಪಡಿಸಿದ್ದಾರೆ.

ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ನಗರದ ಶಿವಯೋಗಿ ಮಂದಿರದಲ್ಲಿ ಆಯೋಜಿಸಲಾಗಿದ್ದ 66ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು.

ದಾವಣಗೆರೆಯಲ್ಲಿ ಸಮ್ಮೇಳನ ನಡೆಯಲು ರಾಜಕೀಯ ಮುಖಂಡರು, ಸಂಘ- ಸಂಸ್ಥೆಗಳು ಶ್ರಮಿಸಬೇಕಿದೆ. ಈ ದಿಸೆಯಲ್ಲಿ ತಾವೂ ಸಹ ಕೈ ಜೋಡಿಸುವುದಾಗಿ ಶ್ರೀಗಳು ಹೇಳಿದರು. ಬಸವಣ್ಣನವರ ವಿಶ್ವಕುಟುಂಬ ಭಾವನೆಯಂತೆ ಕನ್ನಡಿಗರು ಎಲ್ಲ ಭಾಷಿಗರು ಹಾಗೂ ಧರ್ಮದವರನ್ನು ತಮ್ಮವರೆಂದು (4ನೇ ಪುಟಕ್ಕೆ)

## ಆರ್ಥಿಕ ಮೀಸಲಾತಿಗೆ 8 ಲಕ್ಷ ರೂ. ಮಾನದಂಡ ಮುಂದುವರಿಕೆ

**ಸುಪ್ರೀಂ ಕೋರ್ಟ್‌ಗೆ ನಿಲುವು ತಿಳಿಸಿದ ಕೇಂದ್ರ**

ನವದೆಹಲಿ, ಜ. 2- ವಾರ್ಷಿಕ 8 ಲಕ್ಷ ರೂ.ಗಳಿಗಿಂತ ಕಡಿಮೆ ಆದಾಯ ಹೊಂದಿರುವವರನ್ನು ಆರ್ಥಿಕವಾಗಿ ದುರ್ಬಲ ವರ್ಗದವರೆಂದು ಪರಿಗಣಿಸುವಂತೆ ತ್ರಿಸದಸ್ಯ ಸಮಿತಿ ಸಲ್ಲಿಸಿರುವ ವರದಿಗೆ ಮಾನ್ಯತೆ ನೀಡುವುದಾಗಿ ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ತಿಳಿಸಿದೆ.

ನೀಟ್ - ಪಿಜಿ ಪ್ರವೇಶಕ್ಕೆ ಸಂಬಂಧಿಸಿದಂತೆ ಈ ಪ್ರಮಾಣ ಪತ್ರ ಸಲ್ಲಿಸಿರುವ ಕೇಂದ್ರ ಸರ್ಕಾರ, 8 ಲಕ್ಷ ರೂ.ಗಳವರೆಗೆ ಆದಾಯ ಹೊಂದಿರುವವರು ಮಾತ್ರ ಆರ್ಥಿಕ ಮೀಸಲಾತಿ ಪಡೆಯಲು ಅರ್ಹರು ಎಂದು ಸಮಿತಿ ತಿಳಿಸಿರುವುದಾಗಿ ಹೇಳಿದೆ. ಈ ಶಿಫಾರಸ್ಸನ್ನು ಒಪ್ಪಿಕೊಳ್ಳಲು ಹಾಗೂ (2ನೇ ಪುಟಕ್ಕೆ)

## ಪಶ್ಚಿಮ ಬಂಗಾಳದಲ್ಲಿ ಶಾಲೆಗಳು ಬಂದ್, ಕಚೇರಿಗಳಿಗೆ 50% ಜನ

ಕೊಲ್ಕೊತಾ,ಜ. 2- ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸೋಮವಾರದಿಂದ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಮುಚ್ಚುವಂತೆ ಮತ್ತು ಕಚೇರಿಗಳಲ್ಲಿ ಶೇ.50 ರಷ್ಟು ಜನರು ಮಾತ್ರ ಇರುವಂತೆ ಪಶ್ಚಿಮ ಬಂಗಾಳ ಸರ್ಕಾರ ಆದೇಶಿಸಿದೆ.

ರಾತ್ರಿ 10ರಿಂದ ಬೆಳಿಗ್ಗೆ 5 ಗಂಟೆಯವರೆಗೆ (2ನೇ ಪುಟಕ್ಕೆ)

## ನ್ಯಾಯಮೂರ್ತಿ ನೇಮಕದ 23 ಮರು ಶಿಫಾರಸ್ಸು ಬಾಕಿ

ನವದೆಹಲಿ, ಜ. 2 – ನ್ಯಾಯಮೂರ್ತಿಗಳ ನೇಮಕಕ್ಕೆ ಮರು ಶಿಫಾರಸ್ಸು ಮಾಡಲಾದ 23 ಹೆಸರುಗಳು ಸರ್ಕಾರದ ಬಳಿ ಈಗಲೂ ಬಾಕಿ ಉಳಿದಿವೆ ಎಂದು ಉನ್ನತ ಮೂಲಗಳು ತಿಳಿಸಿವೆ.

ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿ (2ನೇ ಪುಟಕ್ಕೆ)


ನಮ್ಮ ಆಸ್ಪತ್ರೆಯ ವಾರ್ಷಿಕೋತ್ಸವ

ಶಿವಕೃಪ ಗ್ಯಾಸ್ಟ್ರೋಕೇರ್ & ಎಂಡೋಸ್ಕೋಪಿ ಸೆಂಟರ್ ಹಾಗೂ ಅನಿಕಾ ಡಯಾಗ್ನೋಸ್ಟಿಕ್ ಸೆಂಟರ್

ನಮ್ಮ ಆಸ್ಪತ್ರೆಯ ಯಶಸ್ಸಿಗೆ ಸದಾ ಜೊತೆಯಾಗಿ ಬೆಂಬಲಿಸುತ್ತಾ ಬಂದಿರುವ ನಿಮಗೆ ಧನ್ಯವಾದಗಳು.
2022ರ ಹೊಸ ವರ್ಷ ನಿಮ್ಮೆಲ್ಲರಿಗೂ ಆರೋಗ್ಯ ಹಾಗೂ ನೆಮ್ಮದಿಯನ್ನು ತರಲಿ ಎಂದು ಹಾರೈಸುತ್ತೇವೆ.
ನಮ್ಮ ಆಸ್ಪತ್ರೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಗ್ಯಾಸ್ಟ್ರೋಇಂಟೆಸ್ಟಿನಲ್, ಲಿವರ್, ಪ್ಯಾನ್‌ಕ್ರಿಯಾಟಿಕ್ ಸಂಬಂಧಿಸಿದ ರೋಗಿಗಳಿಗೆ
ದಿನಾಂಕ : 03, 04 ಹಾಗೂ 05 ಜನವರಿ 2022 ರಂದು ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿದೆ.
ಈ ಶಿಬಿರದಲ್ಲಿ ಸಮಾಲೋಚನೆ, ರಕ್ತ ತಪಾಸಣೆ ಹಾಗೂ ಅಲ್ಟ್ರಾಸೌಂಡ್ ಸ್ಕ್ಯಾನ್‌ಗಳನ್ನು ವಿನಾಯಿತಿ ದರದಲ್ಲಿ ಕೈಗೊಳ್ಳಲಾಗುವುದು. ಈ ಸಂದರ್ಭವನ್ನು ಸದುಪಯೋಗಪಡಿಸಿಕೊಳ್ಳಿ ಹಾಗೂ ನಮ್ಮ ಯಶೋಗಾಥೆಯಲ್ಲಿ ಜೊತೆಯಾಗಿರಿ ಎಂದು ಮನವಿ ಮಾಡಿಕೊಳ್ಳುತ್ತೇವೆ.

ಡಾ|| ಅರವಿಂದ ಕೆ.ಎನ್., ಎಂ.ಎಸ್., ಎಂ.ಸಿಹೆಚ್ (ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ)
ಜಿ.ಐ. ಆಂಕೋಸರ್ಜರಿ ಪರಿಣಿತರು (ಟಿ.ಎಂ.ಹೆಚ್. ಮುಂಬೈ)
ಶಿವಕೃಪ ಗ್ಯಾಸ್ಟ್ರೋಕೇರ್ ಅಂಡ್ ಎಂಡೋಸ್ಕೋಪಿ ಸೆಂಟರ್
4ನೇ ಮೇನ್ ರಸ್ತೆ, 9ನೇ ಕ್ರಾಸ್, ಸರ್.ಎಂ. ವಿಶ್ವೇಶ್ವರಯ್ಯ ಪಾರ್ಕ್ ಹಿಂಭಾಗ,
ನಂದಿ ಆಸ್ಪತ್ರೆ ಪಕ್ಕ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋ. : 90192 06569

ವಿಂಗ್ ಕಮಾಂಡರ್ ಡಾ|| ಡಿ. ದಿವಾಕರ್, ಎಂ.ಬಿ.ಬಿ.ಎಸ್, ಡಿಎನ್‌ಬಿ
(ರೇಡಿಯೋಡಯಾಗ್ನಸಿಸ್) (ದೆಹಲಿ)ರೇಡಿಯಾಲಜಿಸ್ಟ್, ಸಲಹಾ ವೈದ್ಯರು
ಅನಿಕಾ ಡಯಾಗ್ನೋಸ್ಟಿಕ್ ಸೆಂಟರ್
# 2937/5, 5ನೇ ಮೇನ್, 3ನೇ ಕ್ರಾಸ್, ಎಂ.ಸಿ.ಸಿ. "ಬಿ" ಬ್ಲಾಕ್,
ಮಾಮಾಸ್ ಜಾಯಿಂಟ್ ರೋಡ್, ದಾವಣಗೆರೆ-4. ಫೋ. : 63617 73799

ಈ ಶಿಬಿರದಲ್ಲಿ ಭಾಗವಹಿಸಲಿಚ್ಛಿಸುವವರು ಮುಂಚಿತವಾಗಿ ಹೆಸರು ನೋಂದಾಯಿಸಿ : 90192 06569



BIG DEALS & DISOUNTS ON EVERY PURCHASE!

ವಿಜಯ ಕರ್ನಾಟಕ VIJAY KARNATAKA NO.1 READ DAILY IN KARNATAKA PRESENTS

LAST 2 DAYS

ಫರ್ನಿಚರ್ ಎಕ್ಸ್‌ಪೋ

FURNITURE EXPO

DATE: 31 DEC | 01 | 02 | 03 | 04 JAN 2022
VENUE: BAPUJI BANK SAMUDAYA BHAVANA
SHAMANUR ROAD, DAVANGERE

LIVING ROOM SET | RECLINERS | SOFA'S
BED ROOM SET | DRESSERS | MATTRESS
SOLID WOOD DINNING | DESIGNER DINNINGS | COFFEE TABLES
CARVED FURNITURE | MASSAGE CHAIRS

INDIAN & IMPORTED FURNITURE | HAND CARVED FURNITURE
SOFA'S | LEATHER RECLINERS | DINNING SETS | SOLID WOOD FURNITURE
BED ROOM SETS | CENTRE TABLES | FURNISHINGS | ARTIFACTS
RUGS & CARPET | MATTRESS & POUFS | MURALS & MUCH MORE..

MORE THAN 500+ FURNITURE & INTERIOR PRODUCTS ON DISPLAY | BIG SAVINGS FOR EVERY PURCHASE | covid-19 protocol followed at the venue | +91 96111 76669 Ticket Rs. 10/- (per head) | AN EVENT BY IEE



# ದೊಡ್ಡಬಾತಿ ಪರಶುರಾಮಪ್ಪ ಪರುಸಪ್ಪ ನಿಧನ



ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ವಾಸಿ
ಜಿಲ್ಲಾ ಉಪ್ಪಾರ ಸಮಾಜದ ಹಿರಿಯ ಮುಖಂಡರಾದ

ದೊಡ್ಡಬಾತಿ ಪರಶುರಾಮಪ್ಪ ಪರುಸಪ್ಪ
(ಜೊಳ್ಳಿ ಪರುಸಪ್ಪ)

*ಇವರು ದಿನಾಂಕ : 02.01.2022ರ ಭಾನುವಾರ ಸಂಜೆ 4 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 96 ವರ್ಷ ವಯಸ್ಸಾಗಿತ್ತು. ದಿವಂಗತರು ಪತ್ನಿ ಶಾಂತಮ್ಮ (ಕೆಂಚಮ್ಮ) ಸೇರಿದಂತೆ, ನಾಲ್ವರು, ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗದವರನ್ನು ಅಗಲಿದ್ದಾರೆ.*

*ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 03.01.2022ರ ಸೋಮವಾರ ಮಧ್ಯಾಹ್ನ 1.00 ಗಂಟೆಗೆ ಸ್ವಗ್ರಾಮವಾದ ದೊಡ್ಡಬಾತಿಯ ಮೃತರ ಸ್ವಂತ ತೋಟದಲ್ಲಿ ನೆರವೇರಿಸಲಾಗುವುದು.*

ಇಂತಿ ದುಃಖತಪ್ತ ಕುಟುಂಬ ವರ್ಗ :
ಪಿ.ಚುಕ್ಕಪ್ಪ ಮತ್ತು ಸಹೋದರರು, ದೊಡ್ಡಬಾತಿ
ಫೋನ್ : 98869 58688, 96117 85456

# ನೌಕರರ ಬೇಡಿಕೆಗಳ ಈಡೇರಿಕೆಗಾಗಿ ಶಾಸಕ ರಾಮಪ್ಪಗೆ ಮನವಿ




ಹರಿಹರ, ಜ.2- ತಾಲ್ಲೂಕು ಸರ್ಕಾರಿ ನೌಕರರ ಸಂಘದ ವತಿಯಿಂದ ಸರ್ಕಾರಿ ನೌಕರರಿಗೆ ಕೇಂದ್ರ ಮಾದರಿಯ ವೇತನವನ್ನು ನೀಡುವಂತೆ ಹಾಗೂ ಎನ್.ಪಿ.ಎಸ್. ರದ್ದುಪಡಿಸಿ ಹಳೆಯ ಪಿಂಚಣಿ ಯೋಜನೆ ಜಾರಿ ಮಾಡುವಂತೆ ಸರ್ಕಾರಿ ನೌಕರರು ಒತ್ತಾಯಿಸಿದ್ದಾರೆ.

ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ ನೌಕರರ ಒತ್ತಡ ಕಡಿಮೆ ಮಾಡಲು ಹಾಗೂ ಸಿ ಅಂಡ್ ಆರ್ ನಿಯಮ ತಿದ್ದುಪಡಿ ಮತ್ತು ಉಪನ್ಯಾಸಕರು, ಪ್ರೌಢಶಾಲಾ ಶಿಕ್ಷಕರು, ಪ್ರಾಥಮಿಕ ಶಾಲಾ ಶಿಕ್ಷಕರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರಿ ನೌಕರರು ಶಾಸಕ ರಾಮಪ್ಪ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ತಾಲ್ಲೂಕು ನೌಕರರ ಸಂಘದ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ, ಕಾರ್ಯದರ್ಶಿಯಾದ ಡಿ.ಟಿ. ಮಂಜಪ್ಪ, ಖಜಾಂಚಿ ಪಿ. ಶಿವಮೂರ್ತಿ ರಾಜ್ಯ ಪರಿಷತ್ ಸದಸ್ಯ ವಿಜಯ ಮಹಾಂತೇಶ್, ಪ್ರಾ.ಶಾ.ಶಿ. ಸಂಘದ ಅಧ್ಯಕ್ಷ ಹೆಚ್ ಚಂದ್ರಪ್ಪ, ಕಾರ್ಯದರ್ಶಿ ಶರಣ್ ಕುಮಾರ್ ಹೆಗಡೆ, ಡಿ.ಎಂ. ಮಂಜುನಾಥಯ್ಯ, ಪ್ರೌ.ಶಾ.ಸ.ಶಿ. ಸಂಘದ ಜಿಲ್ಲಾಧ್ಯಕ್ಷ ಡಿ.ಎಂ. ಮಂಜುನಾಥಯ್ಯ, ಪ್ರೌ.ಶಾ.ಶಿ. ಸಂಘದ ಡಿ.ಟಿ.ತಿಪ್ಪಣ್ಣ ರಾಜು, ಅಧ್ಯಕ್ಷರು ಪ್ರೌ. ಶಾ.ಸ.ಶಿ.ಸಂಘ, ಗದಿಗೆಪ್ಪ ವೈ. ಹಳೇಮನಿ, ಕಾರ್ಯದರ್ಶಿ ಪ್ರಾ.ಶಾ.ಮು. ಸಂಘ, ಯು.ಆರ್. ರಮೇಶ್, ಪ್ರಕಾಶ್, ಪಿಡಿಓಗಳಾದ ಶಾಮನೂರು ರಾಮನಗೌಡ ಹಾಗೂ ಅರವಿಂದ್, ಅಕ್ಷಯ್ ಕುಮಾರ್, ಬಿ ಚನ್ನಬಸಪ್ಪ, ಅಂಗಡಿ ಮಲ್ಲಿಕಾರ್ಜುನಪ್ಪ, ರಿಯಾಜ್ ಅಹಮ್ಮದ್, ಮುಸ್ತಾಕ್ ಅಹಮದ್, ಕರಿಬಸಪ್ಪ ಕುಪ್ಪೇಲೂರು, ಜ್ಯೋತಿ ಹೆಚ್.ಆರ್., ರಾಜ್ಯ ಪ್ರಧಾನ ಕಾರ್ಯದರ್ಶಿ ಸಾವಿತ್ರಿ ಬಾಯಿ ಫುಲೆ ಸಂಘ, ರತ್ನವ್ವ ಸಾಲಿಮಠ, ರೂಪ ಕಾಮತ್, ಅಶ್ರಫ್ ಅಲಿ ದೊಡ್ಮನಿ, ಸಿದ್ದಪ್ಪ ಸಂಗಣ್ಣನವರ್, ರಮೇಶ್, ರಫೀಕ್, ಶೋಭಾ ನಾರಾಯಣ ರೆಡ್ಡಿ, ಸುರೇಖ, ನೂರ್ ಅಹಮದ್ ಜಮಖಾನಿ, ಆರಾಧ್ಯ, ಪ್ರಭು, ಬಿ.ಎಸ್. ಶಿವಕುಮಾರ್, ಕೆ.ಹೆಚ್ ಶಿವಕುಮಾರ್ ಸೇರಿದಂತೆ ಇನ್ನು ಹಲವಾರು ಪದಾಧಿಕಾರಿಗಳು ನಿರ್ದೇಶಕರು ಹಾಗೂ ವೃಂದ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಮಾನದಂಡ ಮುಂದುವರಿಕೆ

**(1ನೇ ಪುಟದಿಂದ)** ಅದರಂತೆ ಮಾನದಂಡ ಅಳವಡಿಸಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಇಲಾಖೆಯ ಕಾರ್ಯದರ್ಶಿ ಸುಬ್ರಮಣ್ಯಂ ಸರ್ಕಾರದ ಪರವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದಾರೆ.

ಆರ್ಥಿಕ ಹಿಂದುಳಿದಿರುವಿಕೆ ಗುರುತಿಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರ ಕಳೆದ ವರ್ಷ ನವೆಂಬರ್‌ನಲ್ಲಿ ಸಮಿತಿ ರಚಿಸಿತ್ತು. ಸಮಿತಿಯಲ್ಲಿ ಮಾಜಿ ಹಣಕಾಸು ಕಾರ್ಯದರ್ಶಿ ಅಜಯ್ ಭೂಷಣ್ ಪಾಂಡೆ, ಐ.ಸಿ.ಎಸ್.ಎಸ್.ಆರ್. ಸದಸ್ಯ ಕಾರ್ಯದರ್ಶಿ ವಿ.ಕೆ. ಮಲ್ಹೋತ್ರ ಹಾಗೂ ಕೇಂದ್ರ ಸರ್ಕಾರದ ಪ್ರಧಾನ ಆರ್ಥಿಕ ಸಲಹೆಗಾರ ಸಂಜೀವ್ ಸನ್ಯಾಲ್ ಅವರಿದ್ದಾರೆ.

ಸಮಿತಿ ಕಳೆದ ವರ್ಷ ಡಿಸೆಂಬರ್ 31ರಂದು ವರದಿ ಸಲ್ಲಿಸಿತ್ತು. ಈಗಿರುವ 8 ಲಕ್ಷ ರೂ.ಗಳ ಮಿತಿಯನ್ನು ಉಳಿಸಿಕೊಳ್ಳಬಹುದು ಎಂದು ಸಮಿತಿ ವರದಿ ಸಲ್ಲಿಸಿದೆ.

## 101 ಜೋಡಿ ಸರ್ವಧರ್ಮ ವಿವಾಹ

**ರಾಣೇಬೆನ್ನೂರು**

ರಾಣೇಬೆನ್ನೂರು, ಜ.2- ತಮ್ಮ ತಂದೆ, ತಾಯಿ ಸ್ಮರಣಾರ್ಥ ಮಾರ್ಚ್ ತಿಂಗಳಿನಲ್ಲಿ ಉಚಿತವಾಗಿ 101 ಜೋಡಿ ಸರ್ವಧರ್ಮ ಸಾಮೂಹಿಕ ವಿವಾಹ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ನಗರಸಭೆ ಮಾಜಿ ಸದಸ್ಯ ಮಂಜುನಾಥ ಗೌಡಶಿವಣ್ಣನವರ ತಿಳಿಸಿದ್ದಾರೆ.

ವರನಿಗೆ ಧೋತ್ರ, ಶರ್ಟ್ ಬಟ್ಟೆ, ಟವೆಲ್ ಹಾಗೂ ವಧುವಿಗೆ ಸೀರೆ, ಬ್ಲೌಜ್‌ಪೀಸ್, ಚಿನ್ನದ ಮಾಂಗಲ್ಯ, ಕಾಲುಂಗರ ಉಚಿತವಾಗಿ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ 9844490443ಗೆ ಸಂಪರ್ಕಿಸಬಹುದು. ಪತ್ರಿಕಾಗೋಷ್ಠಿಯಲ್ಲಿ ಈರಣ್ಣ ಮಾಕನೂರ, ಮಹೇಶ ಹೊಸರಳ್ಳಿ, ರೇವಣಪ್ಪ ಗೌಡಶಿವಣ್ಣನವರ, ಕುಮಾರ ಗೌಡಪ್ಪನವರ, ಮಂಜುನಾಥ ದುಗ್ಗತ್ತಿ, ನಿತ್ಯಾನಂದ ಕುಂದಾಪುರ, ರೇವಣೆಪ್ಪ ಗೌಡಶಿವಣ್ಣನವರ, ಕುಬೇರ ಕೊಂಡಜ್ಜಿ, ನಾಗರಾಜ ಮಾಕನೂರ, ಬಿ.ಕೆ.ಕೊಪ್ಪದ, ಶಿವಕುಮಾರ ಗೌಡ ಶಿವಣ್ಣನವರ ಇದ್ದರು.

## ಮತದಾರರ ಪಟ್ಟಿ ಪರಿಷ್ಕರಣೆ

### 25 ರೊಳಗೆ ಮತದಾರರಿಗೆ ಗುರುತಿನ ಚೀಟಿ

ದಾವಣಗೆರೆ, ಜ.2- ಮತದಾರರ ಪಟ್ಟಿ ಪರಿಷ್ಕರಣೆಯ ಬಗ್ಗೆ ಮಾಹಿತಿ ಪಡೆದ ಕಾರ್ಯದರ್ಶಿಗಳು, ಹೊಸದಾಗಿ ನೋಂದಣಿಗೆ ಅರ್ಜಿ ಸಲ್ಲಿಸಿರುವ 18 ರಿಂದ 21 ವರ್ಷದೊಳಗಿನ ಅರ್ಜಿಗಳನ್ನು ವಿವಿಧ ಹಂತಗಳಲ್ಲಿ ಪರಿಶೀಲಿಸಿ, ಯಾವ ಅರ್ಹ ಮತದಾರರೂ ಪಟ್ಟಿಯಿಂದ ಬಿಟ್ಟು ಹೋಗದಂತೆ ನೋಡಿಕೊಳ್ಳಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ತಮ್ಮ ಅಧ್ಯಕ್ಷತೆಯಲ್ಲಿ ಸಭೆ ನಡೆಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಈ ಪರಿಷ್ಕರಣೆಯಲ್ಲಿ ಶೇ.1.78ರಷ್ಟು ಹೊಸ ಮತದಾರರು ಸೇರ್ಪಡೆಯಾಗಿದ್ದಾರೆ. ಅರ್ಹ ಮತದಾರರಿಗೆ ಇದೇ ದಿನಾಂಕ 25 ರೊಳಗೆ ಮತದಾರರ ಗುರುತಿನ ಪತ್ರ ನೀಡಲಾಗುವುದು ಎಂದರು.

ಪರಿಷ್ಕರಣೆ ಸುಸೂತ್ರವಾಗಿ ಆಗಿದೆ. ನಾನೇ ಕೆಲವನ್ನು ಪರಿಶಿಲಿಸಿದ್ದೇನೆ. ಯಾವುದೇ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆಯುವಾಗ ಅವರಿಗೆ ನೋಟೀಸ್ ನೀಡಿ, ಅವರ ಅಹವಾಲು, ಕುಂದು ಕೊರತೆಗಳನ್ನು ಆಲಿಸಿ ಶೇ. ನೂರರಷ್ಟು ಪರಿಶೀಲನೆಗೊಳಪಡಿಸಲಾಗಿದೆ ಎಂದವರು ಹೇಳಿದರು.

ಕಳೆದ ಐದಾರು ವರ್ಷಗಳಿಂದ ಚುನಾವಣಾ ಆಯೋಗ ಜಿಲ್ಲೆಗಳಿಗೆ ವೀಕ್ಷಕರನ್ನು ನೇಮಿಸಿ, ಬಹಳ ಕಟ್ಟುನಿಟ್ಟಾಗಿ ಮತದಾರರ ಪಟ್ಟಿ ಪರಿಷ್ಕರಣೆಗೆ ಆದ್ಯತೆ ನೀಡಿದೆ. ಎರಡೂ ಕಡೆ ಹೆಸರಿರುವುದು, ಅಕ್ಕಪಕ್ಕದ ಜಿಲ್ಲೆಯಲ್ಲಿ ಮತದಾರರ ಪಟ್ಟಿಯಲ್ಲಿರುವಂತಹ ಪ್ರಕರಣಗಳು ಆದಷ್ಟು ಕಡಿಮೆಯಾಗಿವೆ ಎಂದವರು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಜಿ.ಪಂ. ಸಿಇಒ ಡಾ. ವಿಜಯ್ ಮಹಾಂತೇಶ್ ದಾನಮ್ಮನವರ್ ಮತ್ತಿತರರು ಉಪಸ್ಥಿತರಿದ್ದರು.

## ಸಿದ್ಧಗಂಗಾ ಮಕ್ಕಳ ಲೋಕದ ವತಿಯಿಂದ ಕವಿಗೋಷ್ಠಿ

ದಾವಣಗೆರೆ, ಜ.2- ನಿಟುವಳ್ಳಿಯ ಶ್ರೀ ಸಿದ್ಧಗಂಗಾ ಮಕ್ಕಳ ಲೋಕದ ವತಿಯಿಂದ ಮಹೇಶ್ವರಿ ಶಾಲೆಯಲ್ಲಿ ಮಕ್ಕಳ ಕವಿಗೋಷ್ಠಿ ನಡೆಯಿತು. ಮಕ್ಕಳ ಬರವಣಿಗೆ ಸ್ಪರ್ಧೆಯಲ್ಲಿ 50 ಮಕ್ಕಳು ಭಾಗವಹಿಸಿದ್ದರು. ಕವಿಗೋಷ್ಠಿ ಯಲ್ಲಿ ಅನುಷಾ, ಜೀವನ್, ಲೋಹಿತ್, ನರಸಿಂಹ, ಭರತ್, ಕಾವ್ಯ, ಉಷಾ, ಕಾರ್ತಿಕ್, ಮೊನಿಕಾ, ತಾರಾ, ಧನುಷ್ ಭಾಗವಹಿಸಿ, ನಿರ್ದೇಶಕರಾದ ಬಿ.ಎಂ. ಮುರಿಗೆಯ್ಯ ಅವರಿಂದ ಪಡೆದರು.

ಮುಖ್ಯ ಅತಿಥಿಗಳಾಗಿ ಅಜಯ್, ಲೋಕೇಶ್ ಆಗಮಿಸಿ, ಮಕ್ಕಳಿಗೆ ಕಲಿಕೆಯ ಮಹತ್ವವನ್ನು ತಿಳಿಸಿದರು. ಮಕ್ಕಳ ಲೋಕದ ನಿರ್ದೇಶಕ ಬಾಗೇವಾಡಿಯ ರುಕ್ಮಾಬಾಯಿ ಕೊಂತಿಕಲ್ ವಚನಗಳನ್ನು ಹೇಳಿಕೊಟ್ಟರು.

ಮುಖ್ಯ ಗುರುಗಳಾದ ಜಿ.ಸಿ. ಧನಂಜಯ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಸಾಹಿತಿ ಕೆ.ಎನ್. ಸ್ವಾಮಿ ಪ್ರಾಥಮಿಕ ಶಿಕ್ಷಣ ಹಾಗೂ ಶಿಕ್ಷಕರು ಮಕ್ಕಳ ಪಾಲಿನ ದೇವರು ಎಂದರು.

ರಾಘವೇಂದ್ರ ಶಾಲೆಯ ಮುಖ್ಯ ಗುರುಗಳಾದ ಲೋಕೇಶ್, ಡಿ.ಟಿ. ರವಿಗೌಡ, ಸಿ. ಮುತ್ತಣ್ಣ, ಬಿ.ಟಿ. ಮಂಜುನಾಥ್, ಕೆ.ಎಂ. ರುದ್ರಮ್ಮ, ಆಯೇಷಾ ಮಕ್ಕಳ ಸ್ಪರ್ಧೆಗಳ ತೀರ್ಪುಗಾರರಾಗಿದ್ದರು.

## ಪ.ಬಂಗಾಳದಲ್ಲಿ ಶಾಲೆಗಳು ಬಂದ್

**(1ನೇ ಪುಟದಿಂದ)** ಅಗತ್ಯ ಸೇವೆಗಳಿಗೆ ಮಾತ್ರ ಅನುಮತಿ ನೀಡಲಾಗಿದೆ. ಸ್ಥಳೀಯ ರೈಲು ಹಾಗೂ ಮಾಲ್ ಮತ್ತು ಮಾರ್ಕೆಟ್‌ಗಳಲ್ಲಿ ಶೇ.50ರಷ್ಟು ಮಾತ್ರ ಜನರು ಇರುವಂತೆ ನಿರ್ಬಂಧ ಹೇರಲಾಗಿದೆ.

ಸಿನೆಮಾ, ಬಾರ್, ರೆಸ್ಟೋರೆಂಟ್, ಮದುವೆ ಇತ್ಯಾದಿ ಸಮಾರಂಭಗಳ ಮೇಲು ನಿರ್ಬಂಧಗಳನ್ನು ಹೇರಲಾಗಿದೆ.

## ನೇಮಕದ ಶಿಫಾರಸ್ಸು ಬಾಕಿ

**(1ನೇ ಪುಟದಿಂದ)** ಸಿದಂತೆ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ಕೊಲೀಜಿಯಂಗಳು ಶಿಫಾರಸ್ಸು ಮಾಡುತ್ತವೆ. ಈ ಹೆಸರುಗಳ ಮರು ಪರಿಶೀಲಿಸುವಂತೆ ಸರ್ಕಾರ ಕೇಳಬಹುದು. ಈ ಸಂದರ್ಭದಲ್ಲಿ 23 ಹೆಸರುಗಳನ್ನು ಕೊಲೀಜಿಯಂಗಳು ಮರು ಶಿಫಾರಸ್ಸು ಮಾಡಿವೆ.

## ಮಹಿಳೆಯರಿಗೆ ಹೊಲಿಗೆ ತರಬೇತಿ

ದಾವಣಗೆರೆ, ಜ.2- ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ವತಿಯಿಂದ ನಾಡಿದ್ದು ದಿನಾಂಕ 4 ರಿಂದ 30 ದಿನಗಳ ಕಾಲ ಮಹಿಳೆಯರಿಗೆ ಹೊಲಿಗೆ ತರಬೇತಿ ಹಮ್ಮಿಕೊಳ್ಳಲಾಗಿದೆ.

ಹಳೇ ತೋಳಹುಣಸೆಯ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ಆವರಣದಲ್ಲಿ ತರಬೇತಿ ನಡೆಯಲಿದೆ.

## ಕೊರೊನಾ; ಜಾಗೃತಿ ವಹಿಸುವುದೇ ನಮಗಿರುವ ಏಕೈಕ ದಾರಿ : ಗಣಪತಿ



**ಹರಿಹರ**

ಹರಿಹರ, ಜ.2- ಕೊರೊನಾದಂತಹ ಮಾರಕ ರೋಗಗಳಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕಾದರೆ ಮುಂಜಾಗರೂಕತಾ ಕ್ರಮಗಳನ್ನು ಅನುಸರಿಸುವುದೇ ನಮಗಿರುವ ಏಕೈಕ ದಾರಿ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹರಿಹರ ಯೋಜನಾಧಿಕಾರಿ ಗಣಪತಿ ಮಾಳಂಜಿ ಹೇಳಿದರು. ಕೆಂಚನಹಳ್ಳಿ ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಬೀದಿ ನಾಟಕ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

ಕಲಾವಿದ ಡಿ.ವೆಂಕಟೇಶ್ ನೇತೃತ್ವದ ಶೃತಿ ಸಾಂಸ್ಕೃತಿಕ ಕಲಾತಂಡವು ನಾಟಕ ಅಭಿನಯಿಸಿತು. ಗ್ರಾ.ಪಂ. ಸದಸ್ಯರುಗಳಾದ ರೇಖಾ ಪ್ರಕಾಶ್, ಹನುಮಂತಪ್ಪ, ಒಕ್ಕೂಟದ ಅಧ್ಯಕ್ಷ ಹೇಮಂತರಾಜ್, ಮುಖ್ಯೋಪಾಧ್ಯಾಯ ಶಂಕರಾಚಾರ್ಯ ಮತ್ತು ಸಹ ಶಿಕ್ಷಕ ಸುನೀಲ್, ಸೇವಾಪ್ರತಿನಿಧಿ ಗಂಗಾಧರ ಭಾಗವಹಿಸಿದ್ದರು. ಮೇಲ್ವಿಚಾರಕ ಚಂದ್ರಹಾಸ್ ಸ್ವಾಗತಿಸಿದರು. ಸಮನ್ವಯಾಧಿಕಾರಿ ನಂದಿನಿ ವಂದಿಸಿದರು.

## 16 ರಿಂದ 25 ರವರೆಗೆ ನಗರದಲ್ಲಿ 'ಏಕಾಂಕ ನಾಟಕ' ಸ್ಪರ್ಧೆ

ದಾವಣಗೆರೆ, ಜ.2- ವೃತ್ತಿ ರಂಗಭೂಮಿ ರಂಗಾಯಣದ ವತಿಯಿಂದ ವಿನೋಬನಗರ ಕೆನರಾ ಬ್ಯಾಂಕ್ ಸಹಯೋಗದಲ್ಲಿ ಅಮೃತ ಮಹೋತ್ಸವದ ಅಂಗವಾಗಿ ಇದೇ ದಿನಾಂಕ 16 ರಿಂದ 25 ರವರೆಗೆ ನಗರದ ಚಿಂದೋಡಿ ಕಲಾಕ್ಷೇತ್ರದಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಏಕಾಂಕ ನಾಟಕ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ವೃತ್ತಿ ರಂಗಭೂಮಿ ರಂಗಾಯಣದ ನಿರ್ದೇಶಕ ಯಶವಂತ ಸರದೇಶಪಾಂಡೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಉತ್ತಮ ನಾಟಕಗಳನ್ನು ಆಯ್ಕೆ ಮಾಡಿ, ಶಾಲಾ ವಿಭಾಗದಲ್ಲಿ ಮೂರು ಮತ್ತು ಕಾಲೇಜು ವಿಭಾಗದಲ್ಲಿ ಮೂರು ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನಗಳನ್ನು ವಿತರಣೆ ಮಾಡಲಾಗುವುದು ಎಂದರು.

ಪ್ರಥಮ 10 ಸಾವಿರ, ದ್ವಿತೀಯ 7500, ತೃತೀಯ 5000 ರೂ. ಗಳನ್ನು ಬಹುಮಾನ ನೀಡಲಾಗುವುದು. ಇದರೊಟ್ಟಿಗೆ ಉತ್ತಮ ನಟ, ನಟಿ, ಬರಹಗಾರ, ಸಂಗೀತಜ್ಞ, ಇತ್ಯಾದಿ 10 ವೈಯಕ್ತಿಕ ಬಹುಮಾನಗಳನ್ನು ಸಹ ನೀಡಲಾಗುವುದು ಎಂದು ಹೇಳಿದರು.

ಶಾಲಾ-ಕಾಲೇಜು ಪಠ್ಯಾಧರಿತ ಏಕಾಂಕಗಳನ್ನು ಅಥವಾ ದೇಶಭಕ್ತಿಯ ಕಥಾವಸ್ತು ಹೊಂದಿದ ಏಕಾಂಕಗಳಿಗೆ ಆದ್ಯತೆ ಇರುತ್ತದೆ. ಪ್ರತಿ ತಂಡಕ್ಕೆ 1500 ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ.

ಶಾಲಾ-ಕಾಲೇಜು ವಿದ್ಯಾರ್ಥಿಗಳಲ್ಲಿ ರಂಗಾಸಕ್ತಿ ಮೂಡಿಸಲು, ಕಲೆ, ಸಂಸ್ಕೃತಿ, ಪರಂಪರೆಯ ಅಧ್ಯಯನದ ಬಗ್ಗೆ ಗಮನ ಸೆಳೆಯಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. 'ರಂಗ ಪಂಚಾಂಗ' ಶೀರ್ಷಿಕೆಯಡಿಯಲ್ಲಿ ವಿವಿಧ ರಂಗ ಚಟುವಟಿಕೆಗಳನ್ನು ನಡೆಸುವ ಉದ್ದೇಶ ಹೊಂದಲಾಗಿದೆ ಎಂದು ಮಾಹಿತಿ ನೀಡಿದರು.

ಹೆಚ್ಚಿನ ವಿವರಗಳಿಗಾಗಿ ವೃತ್ತಿ ರಂಗಭೂಮಿ ರಂಗಾಯಣ, ಪದ್ಮಶ್ರೀ ಚಿಂದೋಡಿ ಲೀಲಾ ಕಲಾಕ್ಷೇತ್ರ, ಎಂಸಿಸಿ ಬಿ ಬ್ಲಾಕ್, ಕುವೆಂಪು ನಗರ, ದಾವಣಗೆರೆ (08192- 2006350) ಇವರನ್ನು ಸಂಪರ್ಕಿಸಲು ಕೋರಿದರು.

ಪತ್ರಿಕಾಗೋಷ್ಠಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ಉಪಸ್ಥಿತರಿದ್ದು ಮಾಹಿತಿ ನೀಡಿದರು.

## ಶಿಕ್ಷಕರಲ್ಲಿದೆ ವ್ಯಕ್ತಿತ್ವ ಬದಲಿಸುವ ಶಕ್ತಿ

**(1ನೇ ಪುಟದಿಂದ)** ಒಂದು ಮಂತ್ರ, ಒಂದು ಶಕ್ತಿ ಇದ್ದಂತೆ. ಆ ಮಂತ್ರ ಮಕ್ಕಳಿಗೆ ಸ್ಫೂರ್ತಿ ನೀಡುತ್ತದೆ. ಸಮಾಜದಲ್ಲಿ ಉತ್ತಮ ವ್ಯಕ್ತಿತ್ವ ರೂಪಿಸಿಕೊಂಡು ಹೊರ ಹೊಮ್ಮುವುದು ಹೆಮ್ಮೆಯ ವಿಷಯ ಎಂದು ನುಡಿದರು.

51 ವರ್ಷಗಳಿಂದ ಒಂದು ಶಿಕ್ಷಣ ಸಂಸ್ಥೆ ನಿರಂತರವಾಗಿ ನಡೆಯುವುದು ಸುಲಭದ ಮಾತಲ್ಲ. ಹೋರಾಟವಿಲ್ಲದೆ ಸವಾಲುಗಳನ್ನು ಎದುರಿಸಲು ಸಾಧ್ಯವಿಲ್ಲ. ಸಾಧಕರನ್ನು ಗುರುತಿಸಿ ಸನ್ಮಾನಿಸುವುದು ನನಗೆ ಹೆಮ್ಮೆಯ ವಿಷಯ. ಆದರೆ ಜಿಲ್ಲೆ ಸಮಾಚಾರ ಬಳಗ ನನ್ನನ್ನೇ ಗುರುತಿಸಿ ಸನ್ಮಾನಿಸುತ್ತಿದೆ. ಬಳಗಕ್ಕೆ ಹಾಗೂ ಪ್ರೀತಿ ತೋರುವ ದಾವಣಗೆರೆಯ ಜನತೆಗೆ ಸದಾ ಋಣಿಯಾಗಿರುವುದಾಗಿ ಹೇಳಿದರು.

ಬಾಪೂಜಿ ವಿದ್ಯಾಸಂಸ್ಥೆಯ ನಿರ್ದೇಶಕ ಎ.ಎಸ್. ವೀರಣ್ಣ ಅಧ್ಯಕ್ಷತೆ ವಹಿಸಿದ್ದರು. ಬಳಗದ ಸಂಸ್ಥಾಪಕ ವಿ. ಹನುಮಂತಪ್ಪ, ಗೌರವ ಅಧ್ಯಕ್ಷ ಡಾ.ಈಶ್ವರ ಶರ್ಮ, ಅಧ್ಯಕ್ಷೆ ಶ್ರೀಮತಿ ಸತ್ಯಭಾಮ ಮಂಜುನಾಥ್, ಉಪಾಧ್ಯಕ್ಷ ಎಂ.ಎ. ವೆಂಕಟೇಶ್, ಸಹ ಕಾರ್ಯದರ್ಶಿ ಶ್ರೀಮತಿ ಭಾರತಿ, ಸಂಚಾಲಕ ಸಾಲಿಗ್ರಾಮ ಗಣೇಶ್ ಶೆಣೈ, ಮಹಾಂತೇಶ್ ವಿ.ಒಣರೊಟ್ಟಿ, ರಾಘವೇಂದ್ರ ನಾಯರಿ, ಪ್ರಸಾದ್ ಬಂಗೇರ ಇತರರು ಉಪಸ್ಥಿತರಿದ್ದರು

## ಹಾನಿ ಸಾಧ್ಯತೆ ಕಡಿಮೆ

**(1ನೇ ಪುಟದಿಂದ)** ಇರುತ್ತದೆ. ಅವುಗಳಲ್ಲಿನ ನ್ಯುಮೋನಿಯಾ ಸಹ ಕಡಿಮೆ ಇರುತ್ತದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಬೆಲ್ಜಿಯಂನ ನ್ಯೂವೆನ್ ವಿಶ್ವವಿದ್ಯಾನಿಲಯದ ನೆಟ್ಸ್ ಲ್ಯಾಬ್ ಸಹ ಇದೇ ರೀತಿಯ ಅಧ್ಯಯನ ಪ್ರಕಟಿಸಿದೆ. ಇತರೆ ರೂಪಾಂತರಿಗಳಿಗೆ ಹೋಲಿಸಿದರೆ ಶ್ವಾಸಕೋಶದಲ್ಲಿ ಓಮಿಕ್ರಾನ್ ವೈರಸ್ ಕಡಿಮೆ ಇರುತ್ತದೆ ಎಂದು ವರದಿ ತಿಳಿಸಿದೆ. ಆದರೆ, ಈ ಅಧ್ಯಯನಗಳು ಸಣ್ಣ ಪ್ರಮಾಣದ್ದಾಗಿವೆ. ಈಗಲೇ ಓಮಿಕ್ರಾನ್ ಕುರಿತು ಯಾವುದೇ ನಿರ್ಧಾರಕ್ಕೆ ಬರಲಾಗದು ಎಂದು ವಾರ್‌ವಿಕ್ ವಿಶ್ವವಿದ್ಯಾನಿಲಯದ ವೈರಾಣು ಪರಿಣಿತ ಪ್ರೊ. ಲಾರೆನ್ ಸಂಗ್ ಎಚ್ಚರಿಸಿದ್ದಾರೆ.

## ಹೊನ್ನಾಳಿ-ನ್ಯಾಮತಿ ತಾ.ಗಳ ಕೆರೆಗಳಿಗೆ ವರ್ಷದೊಳಗೆ ನೀರು

**ಶಾಸಕ ರೇಣುಕಾಚಾರ್ಯ**

ಹೊನ್ನಾಳಿ, ಜ. 2- ಕೊಟ್ಟ ಮಾತಿನಂತೆ ಒಂದು ವರ್ಷದೊಳಗೆ ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನ ಕೆರೆಗಳನ್ನು ತುಂಬಿಸುವುದಾಗಿ ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ತಾಲ್ಲೂಕಿನ ಹನುಮಸಾಗರ ಗ್ರಾಮದ ಬಳಿಯ ತುಂಗಭದ್ರಾ ನದಿಯ ತಟದಲ್ಲಿ ಕೆರೆ ತುಂಬಿಸುವ ಯೋಜನೆಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಅವಳಿ ತಾಲ್ಲೂಕಿನ ಕೆರೆಗಳನ್ನು ತುಂಬಿಸಲು ಒಟ್ಟು 518 ಕೋಟಿ ರೂ. ಬಿಡುಗಡೆಯಾಗಿದ್ದು, ಅದರಲ್ಲಿ 17 ಗ್ರಾಮಗಳ 30 ಕೆರೆಗಳನ್ನು ತುಂಬಿಸುವ 112 ಕೋಟಿ ರೂ. ವೆಚ್ಚದ ಕಾಮಗಾರಿಗೆ ಇದೀಗ ಚಾಲನೆ ಸಿಕ್ಕಿದೆ ಎಂದರು.

ತುಂಗಭದ್ರಾ ನದಿಯ ಮೇಲ್ಭಾಗದಲ್ಲಿ ಬರುವ ಹಳ್ಳಿಗಳ ಕೆರೆಗಳನ್ನು ತುಂಬಿಸಲು 460 ಕೋಟಿ ರೂ.ಹಾಗೂ ಕೆಳಭಾಗದ ಹಳ್ಳಿಗಳಲ್ಲಿನ ಕೆರೆಗಳನ್ನು ತುಂಬಿಸುವ ಬೆನಕನಹಳ್ಳಿ ಏತ ನೀರಾವರಿಗೆ 58 ಕೋಟಿ ರೂ. ಸೇರಿ ಒಟ್ಟು 518 ಕೋಟಿ ರೂ. ಗಳನ್ನು ಸರ್ಕಾರ ಬಿಡುಗಡೆ ಮಾಡಿದ್ದು, ಅವಳಿ ತಾಲ್ಲೂಕಿನ ಎಲ್ಲಾ ಕೆರೆಗಳನ್ನು ತುಂಬಿಸಲಾಗುವುದು ಎಂದು ಹೇಳಿದರು.

ಗೋವಿನಕೋವಿ ಬಳಿ ತುಂಗಭದ್ರಾ ನದಿಯ ತಟದಲ್ಲಿ ಕೆರೆಗಳನ್ನು ತುಂಬಿಸಲು 258 ಕೋಟಿ ರೂ. ವೆಚ್ಚದ ನೀರಾವರಿ ಯೋಜನೆಯ ಕಾಮಗಾರಿ ಚಾಲನೆಯಲ್ಲಿದ್ದು, ವಿದ್ಯುದೀಕರಣ ಹಾಗೂ ಭೂ ಪರಿಹಾರಕ್ಕೆ 20 ಕೋಟಿ ರೂ. ಹಾಗೂ ಕೆರೆಗಳ ಪುನಶ್ಚೇತನಕ್ಕೆ 70 ಕೋಟಿ ಹಣ ಬಿಡುಗಡೆಯಾಗಿದ್ದು, ಸದ್ಯದಲ್ಲೇ ಟೆಂಡರ್ ಪ್ರಕ್ರಿಯೆ ನಡೆಯಲಿದೆ ಎಂದು ತಿಳಿಸಿದರು.

ಹೊನ್ನಾಳಿ - ನ್ಯಾಮತಿ ಅವಳಿ ತಾಲ್ಲೂಕಿನಲ್ಲಿ ಬರುವ ಕೆರೆಗಳು ಹಾಗೂ ಗೋಕಟ್ಟೆಗಳು ಸೇರಿ 127 ಕೆರೆಗಳು ಈ ಯೋಜನೆಯಿಂದ ಭರ್ತಿಯಾಗಲಿದ್ದು, ಅವಳಿ ತಾಲ್ಲೂಕುಗಳಲ್ಲಿ ಜಲಸಮೃದ್ಧಿಯಾಗಲಿದೆ ಎಂದರು ಹಾಗೂ ಶಾಶ್ವತ ನೀರಾವರಿ ಸೌಲಭ್ಯ ಕಲ್ಪಿಸಲು 100 ಕೋಟಿ ರೂ. ವೆಚ್ಚದ ಯೋಜನೆಯ ವರದಿ ಸಿದ್ಧ ಪಡಿಸಿದ್ದು, ಸದ್ಯದರಲ್ಲೇ ಈ ಯೋಜನೆಗೆ ಸರ್ಕಾರದಿಂದ ಹಣ ಬಿಡುಗಡೆಯಾಗಲಿದ್ದು, ಅವಳಿ ತಾಲ್ಲೂಕುಗಳಿಗೆ ಶಾಶ್ವತ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು ಎಂದು ತಿಳಿಸಿದರು.

ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಅವಳಿ ತಾಲ್ಲೂಕಿನ ಕೆರೆಗಳನ್ನು ತುಂಬಿಸುವ ಮಹತ್ವಾಕಾಂಕ್ಷಿ ಯೋಜನೆಗೆ ಹಣ ಬಿಡುಗಡೆ ಮಾಡಿದ್ದು, ಅವಳಿ ತಾಲ್ಲೂಕಿನ ಜನರು ಅವರಿಗೆ ಸದಾ ಚಿರಋಣಿ ಎಂದ ರೇಣುಕಾಚಾರ್ಯ, ನಾನು ಕೊಟ್ಟ ಮಾತಿನಂತೆ ಅವಳಿ ತಾಲ್ಲೂಕುಗಳ ಕೆರೆಗಳನ್ನು ತುಂಬಿಸುತ್ತಿದ್ದೇನೆ ಎಂದರು.

ಶುದ್ಧ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ, ವಿದ್ಯುತ್ ಅಲಂಕಾರಿಕ ದೀಪ, ಸಿಸಿ ರಸ್ತೆಗಳು ಸೇರಿದಂತೆ ನೂರಾರು ಕೋಟಿ ಅನುದಾನಗಳನ್ನು ಸರ್ಕಾರದಿಂದ ತಂದು ಅಭಿವೃದ್ಧಿ ಪಡಿಸುತ್ತಿದ್ದು, ಅವಳಿ ತಾಲ್ಲೂಕುಗಳನ್ನು ಮಾದರಿ ತಾಲ್ಲೂಕು ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಬಗರ್ ಹುಕ್ಕುಂ ಕಮಿಟಿ ಅಧ್ಯಕ್ಷ ಮಾದೇನಹಳ್ಳಿ ನಾಗರಾಜ್, ತಾ.ಪಂ ಮಾಜಿ ಸದಸ್ಯ ಶಿವಾನಂದ್, ಜಿ.ಪಂ. ಮಾಜಿ ಸದಸ್ಯ ಎಂ.ಆರ್.ಮಹೇಶ್ ಸೇರಿದಂತೆ ವಿವಿಧ ಗ್ರಾಮಗಳ ಮುಖಂಡರು ಹಾಗೂ ನೀರಾವರಿ ಇಲಾಖೆ ಎಇಇ ಮಂಜುನಾಥ್ ಸೇರಿದಂತೆ ಮತ್ತಿತರರಿದ್ದರು.

### ಎಸ್.ಬಿ. ಶಾಂತಮ್ಮ ನಿಧನ



ದಾವಣಗೆರೆ ಡಿ.ಸಿ.ಎಂ. ಕ್ವಾರ್ಟರ್ಸ್ ವಾಸಿ ಭೀಮಪ್ಪ ಟಿ. ಇವರ ಪತ್ನಿ ಎಸ್.ಬಿ. ಶಾಂತಮ್ಮ (58) ಇವರು ದಿನಾಂಕ 02.01.2022 ರ ಭಾನುವಾರ ಸಂಜೆ 3.30 ಕ್ಕೆ ನಿಧನರಾದರು. ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 3.01.2022 ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಲಿದೆ.

### ಶತಾಯುಷಿ ಗೋಣಿವಾಡದ ಮಹಾದೇವಪ್ಪ ನಿಧನ



ದಾವಣಗೆರೆ ತಾಲ್ಲೂಕು ಗೋಣಿವಾಡ ಗ್ರಾಮದ ವಾಸಿ ಶತಾಯುಷಿ ಎಂ.ಜಿ.ಮಹಾದೇವಪ್ಪ (100) ಇವರು ದಿನಾಂಕ 02.01.2022ರ ಭಾನುವಾರ ಸಂಜೆ 5.50ಕ್ಕೆ ನಿಧನರಾದರು. ಮೂವರು ಪುತ್ರರು, ನಾಲ್ವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ. 03.01.2022ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಗೋಣಿವಾಡ ಗ್ರಾಮದ ಮೃತರ ತೋಟದಲ್ಲಿ ನೆರವೇರಲಿದೆ.

**ಮಹಿಳಾ ಪಿ.ಜಿ.**
ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ. ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
90601 72745

**ಹೊಸ ಮನೆ ಬಾಡಿಗೆಗೆ/ಲೀಸ್‌ಗಿದೆ**
ಬನಶಂಕರಿ ಹೊಸ ಬಡಾವಣೆ ಕೊಳಚೆ ನಿರ್ಮೂಲನ ಮಂಡಳಿ ಆಫೀಸ್ ಹತ್ತಿರ #192/4-27 ಉತ್ತರ ಮುಖದ 2 ಬೆಡ್ ರೂಂ, ಬೋರ್‌ವೆಲ್ ನೀರಿನ ಸೌಕರ್ಯವಿರುವ ಮೊದಲನೇ ಮಹಡಿಯಲ್ಲಿ ಸುಸಜ್ಜಿತವಾದ ಹೊಸ ಮನೆ ಬಾಡಿಗೆಗೆ/ಲೀಸ್‌ಗೆ ಇದೆ. ಸಂಪರ್ಕಿಸಿ (ಸಸ್ಯಹಾರಿಗಳಿಗೆ ಮಾತ್ರ)
ಮೊ.89719 97005

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್‌ನಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 70×63 Corner, 40×63 West, 30×63 Corner, 40×56 North, 30×50 North, 30×40 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್ ಹತ್ತಿರ ರಶ್ಮಿ ಹಾಸ್ಟೆಲ್ ಹತ್ತಿರ 30×58 ಪೂರ್ವ, ಡಿ.ಸಿ.ಎಂ ಲೇಔಟ್‌ನಲ್ಲಿ, 30×40 ಪೂರ್ವ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆಗಳು ಮಾರಾಟಕ್ಕಿವೆ**
40×60 North ಮೂರು ಬೆಡ್‌ರೂಂ ಮನೆ ಮಾವಿನ ತೋಪು ಹಾಸ್ಪಿಟಲ್ ಹಿಂಭಾಗದಲ್ಲಿ, 30×40 West Two B. Room ಮನೆ ಶಿವಪಾರ್ವತಿ ಲೇಔಟ್.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಹಾಲ್ ಬಾಡಿಗೆಗೆ ಇದೆ**
ನಿಟ್ಟುವಳ್ಳಿ 60 ಅಡಿ ರಿಂಗ್ ರಸ್ತೆಗೆ, 1200 ಚದುರಡಿಯ ವಿಶಾಲವಾದ, ಮೊದಲನೇ ಮಹಡಿ ಹಾಲ್ ಬಾಡಿಗೆಗೆ ಇದೆ. ಶಕ್ತಿ ಗ್ಯಾಸ್ ಆಫೀಸ್ ಎದುರು.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715, 81237 84815

**ಬೇಕಾಗಿದ್ದಾರೆ**
ಹರಿಹರದಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. (ಹರಿಹರದವರಿಗೆ ಆದ್ಯತೆ ನೀಡಲಾಗುವುದು)
8050219547
63641 33480

**ಮನೆ ಬಾಡಿಗೆಗೆ ಇದೆ**
ವಾಸ್ತು ಹಾಗೂ ಸಕಲ ಸೌಕರ್ಯ ಉಳ್ಳ 2ನೇ ಮಹಡಿಯಲ್ಲಿ ಸಿಂಗಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ. #1859/34, ಭಾವ ಸಂಗಮ, 4ನೇ ಮುಖ್ಯ ರಸ್ತೆ, LIC ಕಾಲೋನಿ, ನೂತನ ಕಾಲೇಜು ಹಿಂಭಾಗ ದಾವಣಗೆರೆ.
94487 46875

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ. ನುರಿತ ಅನುಭವವುಳ್ಳ, A. N. M ಮತ್ತು G. N. M. ಆದವರು. ಈ ಕೆಳಗಿನ ಮೊಬೈಲ್ ನಂಬರ್ ಗೆ ತಮ್ಮ ಬಯೋಡೇಟಾ ದೊಂದಿಗೆ ಸಂಪರ್ಕಿಸಿ.
98450 35710

**ಡಾಗ್ ಬೋರ್ಡಿಂಗ್**
ನೀವು ವಿದೇಶಕ್ಕೆ ಹೋಗಲಿದ್ದೀರಾ, ಆರೋಗ್ಯ ಸರಿ ಇಲ್ವಾ ಮನೆಯಲ್ಲಿ ಮಕ್ಕಳು ಇರುವುದರಿಂದ ನಿಮ್ಮ ಪ್ರೀತಿಯ ನಾಯಿಯನ್ನು ನೋಡಿಕೊಳ್ಳಲು ಆಗುತ್ತಿಲ್ಲವೇ, ಹಾಗಿದ್ದರೆ ನಿಮ್ಮ ಪ್ರೀತಿಯ ನಾಯಿಯನ್ನು ನಮ್ಮ ಬಳಿ ಬಿಡಿ. ನಾವು ನಿಮ್ಮ ಪ್ರೀತಿಯ ನಾಯಿ ಆಹಾರ, ಆರೋಗ್ಯ ಮತ್ತು ವಸತಿ ಸಂಪೂರ್ಣ ನಮ್ಮ ಜವಾಬ್ದಾರಿ.
ಆವರಗೆರೆ ಹತ್ತಿರ, SP ಲೇಔಟ್ ದಾವಣಗೆರೆ.
98444 92134

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಬಳ: 10,000/-
ನಂದಿ ಟೈರ್ ಪ್ಲಾನೆಟ್
95352 43598, 95381 87385
Tel Ph:08192-261003

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ. 05.01.2022ರ ಬುಧವಾರ ಮತ್ತು 06.01.2022ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಕೆಲಸಕ್ಕೆ ಬೇಕಾಗಿದ್ದಾರೆ**
Accounts handling and GST filling. Minimum 2 years experienced candidate required * Salary 10k Starting Near D.C. office Davangere. Interview date : 6.1.2022 timings 10.30 to 1.30 pm only
Ph. : 78999 27530

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 94837 64859

**ಬೇಕಾಗಿದ್ದಾರೆ**
ಆಫೀಸ್‌ನಲ್ಲಿ ಕಂಪ್ಯೂಟರ್ ಕೆಲಸಕ್ಕೆ Tally ಆಗಿರುವವರು ಬೇಕಾಗಿದ್ದಾರೆ. ವಿಳಾಸ: ಶ್ರೀ ಆಂಜನೇಯ ಆಗ್ರೋ ಡಿಸ್ಟ್ರಿಬ್ಯೂಟರ್ಸ್, ನಂ.95/1ಎ ಕೆ.ಆರ್. ರೋಡ್, ವಿ.ಆರ್.ಎಲ್. ಆಫೀಸ್ ಹತ್ತಿರ, ದಾವಣಗೆರೆ-577001

**ಮನೆ ಬಾಡಿಗೆಗೆ ಇದೆ**
ಡಬಲ್ ಬೆಡ್ ರೂಮ್ ಮನೆ ಬಾಡಿಗೆಗೆ ಇದೆ. ಶಿವಕುಮಾರ್ ಸ್ವಾಮಿ ಬಡಾವಣೆ ಸರ್ ಎಂ.ವಿ. ಕಾಲೇಜ್ ಹತ್ತಿರ, ಹದಡಿ ರೋಡ್, ದಾವಣೆಗೆರೆ.
76191 23623
94816 70519

**ಮಳಿಗೆ ಬಾಡಿಗೆಗೆ ಇದೆ**
ಕೆ.ಬಿ. ಬಡಾವಣೆ, 1ನೇ ಮೇನ್ ರೋಡ್, #599/3, ಪ್ರೆಸ್ ಕ್ಲಬ್ ಎದುರು, ಸಹ್ಯಾದ್ರಿ ಮೆಡಿಕಲ್ಸ್ ಪಕ್ಕ ಮಳಿಗೆ ಬಾಡಿಗೆಗೆ ಸಿಗುತ್ತದೆ.
94839 89839
93432 04969

**ಬೇಕಾಗಿದ್ದಾರೆ**
ಸೇಲ್ಸ್ ಮಾಡಲು ಪುರುಷರು ಬೇಕಾಗಿದ್ದಾರೆ. ವಾಹನ ಇದ್ದವರಿಗೆ ಅವಕಾಶ ಪರಿಚಯಸ್ಥರೊಂದಿಗೆ ಸಂಪರ್ಕಿಸಿ
94487 51313

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ**
GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**ಬೇಕಾಗಿದ್ದಾರೆ**
ಡ್ರೈವರ್ ಬೇಕಾಗಿದ್ದಾರೆ
TATA ACE / Ashoka Leyland
94487 51313

**TEACHERS WANTED**
We look for trained and untrained teachers with fluency in English for the following subject. English, Maths, Science, Social, Hindi, Kannada, Computer Science
Contact : Sri Gurukula CBSE Residential School, Lokikere Road, Thuruchagatta Village, Davangere.
7338604512, 73386 04513, 98868 40642

**ಸೈಟು ಮಾರಾಟಕ್ಕಿದೆ**
ಸಿದ್ದವೀರಪ್ಪ ಬಡಾವಣೆ 48×50 ಪೂರ್ವ, 48×50 ಪಶ್ಚಿಮ, 40×70 ದಕ್ಷಿಣ, ಪಶ್ಚಿಮ ಕಾರ್ನರ್
86181 82332

**GM HALAMMA PU COLLEGE**
GMIT Campus, P.B. Road, Davanagere.
Wanted Immediately
ತಕ್ಷಣ ಬೇಕಾಗಿದ್ದಾರೆ
ಡಿ.ಟಿ.ಪಿ ಆಪರೇಟರ್
Experience in Speed typing Kannada, English, Hindi, Maths, Physics & Chemistry
Experience: 2-5yrs
Social Science Teacher
Qualification: MSc, B.Ed
Experience: 2-5yrs
Computer Science Lecturer
Qualification: MSc / MCA
Experience: 2-5yrs
WALK-IN INTERVIEW WITH YOUR ORIGINALS on 3rd, 4th & 5th January 2022
Time 9:00 am onwards
For details contact - 9972211111
E-mail your resume to-principal@gmhpuc.ac.in

**ಮನೆ ಬಾಡಿಗೆಗಿದೆ**
ಪೂರ್ವ ದಿಕ್ಕು ನೆಲ ಮಹಡಿ ಮುನ್ಸಿಪಲ್ ನೀರು, ಬೋರ್‌ವೆಲ್ ಸೌಲಭ್ಯವಿರುವ ಎರಡು ಬೆಡ್‌ರೂಂ ಮನೆ ಬಾಡಿಗೆಗಿದೆ. ಸ್ಥಳ: ಜೈನ್ ಟೆಂಪಲ್ ರಸ್ತೆ, ಕಿರುವಾಡಿ ಲೇಔಟ್, ಕೆ.ಬಿ.ಬಡಾವಣೆ, ದಾವಣಗೆರೆ. (ಸಸ್ಯಹಾರಿಗಳಿಗೆ ಮಾತ್ರ)
ಮೊ. 98445 85017

**ಅಡಿಕೆ ಸಸಿ ಮಾರಾಟಕ್ಕೆ**
ಉತ್ತಮ ತಳಿಯ ಅಡಿಕೆ ಸಸಿಗಳು ಮಾರಾಟಕ್ಕೆ ಲಭ್ಯವಿವೆ. ದಾವಣಗೆರೆಯಲ್ಲಿ (ದೊಡ್ಡಬಾತಿ) ಸಂಪರ್ಕಿಸಿ.
88920 08800

**ಹುಡುಗರು ಬೇಕಾಗಿದ್ದಾರೆ**
ಬ್ರಾಂಡೆಡ್ ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
98867 57688

**ಬೇಕಾಗಿದ್ದಾರೆ**
ಅಕೌಂಟೆಂಟ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ
89516 69734

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ.

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ.
ಮೊ : 81339 33804

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಓಂ ಶ್ರೀ ಮಂಚಾಲಮ್ಮ ದೇವಿ ಜೋತಿಷ್ಯ ಫಲ**
100% ಪರಿಹಾರದಲ್ಲಿ ಚಾಲೆಂಜ್
ವಿದ್ಯೆ, ಉದ್ಯೋಗ, ವ್ಯಾಪಾರ, ಪ್ರೀತಿಯಲ್ಲಿ ಮೋಸ, ಮನೆಯಲ್ಲಿ ಅಶಾಂತಿ, ಅತ್ತೆ ಸೊಸೆ ಜಗಳ, ಆರೋಗ್ಯದಲ್ಲಿ ಸಮಸ್ಯೆ ಜಾತಕ ನೋಡಿ ಸಂಪೂರ್ಣ ಭವಿಷ್ಯ ಮತ್ತು ಪರಿಹಾರ ತಿಳಿಸುತ್ತಾರೆ.
ನುಡಿದಂತೆ ನಡೆಯುವ ನಂಬರ್ ಒನ್ ಜೋತಿಷ್ಯರು
96203 05966

# ಸೋತ ಅಭ್ಯರ್ಥಿಗಳಿಗೆ ಆತ್ಮಸ್ಥೈರ್ಯ ತುಂಬಿದ ಶಾಸಕ ರಾಮಪ್ಪ



ಮಲೇಬೆನ್ನೂರು, ಜ.2- ಇಲ್ಲಿನ ಪುರಸಭೆ ಚುನಾವಣೆ ಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಸೋತಿರುವ ಅಭ್ಯರ್ಥಿ ಗಳ ಮನೆಗಳಿಗೆ ಭಾನುವಾರ ಶಾಸಕ ಎಸ್. ರಾಮಪ್ಪ ಭೇಟಿ ನೀಡಿ ಆತ್ಮಸ್ಥೈರ್ಯ ಹೇಳಿ, ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವಂತೆ ಮನವಿ ಮಾಡಿದರು.

ಚುನಾವಣೆಯಲ್ಲಿ ಸೋಲು - ಗೆಲುವು ಸಹಜ. ಸೋಲಿನಿಂದ ಧೃತಿಗೆಡದೇ, ನಿಮ್ಮ ವೈಯಕ್ತಿಕ ಕೆಲಸದಲ್ಲಿ ಮತ್ತು ಪಕ್ಷ ಸಂಘಟನೆಯಲ್ಲಿ ಎಂದಿನಂತೆ ಭಾಗಿಯಾಗಿ ಎಂದರು. 13ನೇ ವಾರ್ಡಿನಲ್ಲಿ ಸೋತಿರುವ ಶೌಕತ್, 4ನೇ ವಾರ್ಡಿನ ಚಂದ್ರಮ್ಮ ಅವರು ನನ್ನ ಸೋಲಿಗೆ ಕಾಂಗ್ರೆಸ್ ಪಕ್ಷದಲ್ಲಿರುವ ಮುಖಂಡರು ಕಾರಣರಾಗಿದ್ದಾರೆ. ಅಂತಹವರಿಂದ ಪಕ್ಷಕ್ಕೆ ಲಾಭಕ್ಕಿಂತ ನಷ್ಟವೇ ಹೆಚ್ಚು. ಅಂತಹವರನ್ನು ನಂಬಿ ನೀವು ಚುನಾವಣೆ ಮಾಡಬೇಡಿ ಎಂದು ಶಾಸಕರಿಗೆ ಹೇಳಿದರು.

ಈ ವೇಳೆ ಕೆಲವು ವಾರ್ಡುಗಳಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿರುವ ಬಗ್ಗೆ ವಾರ್ಡ್ ಸದಸ್ಯರು, ಸಾರ್ವಜನಿಕರು ಶಾಸಕರಿಗೆ ತಿಳಿಸಿದರು. ಆಗ ಅಧಿಕಾರಿಗಳ ಜೊತೆ ಫೋನಿನಲ್ಲಿ ಮಾತನಾಡಿದ ಶಾಸಕ ರಾಮಪ್ಪ ಅವರು, ನೆಪ ಹೇಳದೇ ಒಂದೆರಡು ದಿನಗಳಲ್ಲಿ ನೀರು ಪೂರೈಸಿ ಎಂದು ತಾಕೀತು ಮಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಕಾಂಗ್ರೆಸ್ ಮುಖಂಡರಾದ ಸೈಯದ್ ರೋಷನ್, ನಂದಿಗಾವಿ ಶ್ರೀನಿವಾಸ್, ಸೈಯದ್ ಜಾಕಿರ್, ಎ.ಆರೀಫ್ ಅಲಿ, ಕೆ.ಪಿ. ಗಂಗಾಧರ್, ಪುರಸಭೆ ನೂತನ ಸದಸ್ಯರಾದ ಕೆ.ಜಿ. ಲೋಕೇಶ್, ದಾದಾಪೀರ್, ಸಮಯ್ಯಾ ಬಾನು ಎಂ.ಬಿ. ರುಸ್ತುಂ, ಮಹಮ್ಮದ್ ರಿಯಾಜ್, ನಿಗೀನಾ ಬಾನು ಅನ್ವರ್ ಬಾಷಾ, ಮೊಹಮ್ಮದ್ ಖಲೀಲ್, ಪಿಎಸಿಎಎಸ್ ಅಧ್ಯಕ್ಷ ಪಿ.ಆರ್. ಕುಮಾರ್, ಭೋವಿ ಕುಮಾರ್, ಯೂನೂಸ್, ಪೂಜಾರ್ ದೇವರಾಜ್, ಕೊಟ್ರೇಶ್ ನಾಯ್ಕ ಮತ್ತಿತರರು ಇದ್ದರು.

# ಅತಿಥಿ ಉಪನ್ಯಾಸಕರ ಗೌರವ ಧನ ಹೆಚ್ಚಿಸಿ



**ವಾಸು ಆಗ್ರಹ**

ದಾವಣಗೆರೆ, ಜ.2- ರಾಜ್ಯದ ಶೈಕ್ಷಣಿಕ ಪ್ರಗತಿಗೆ ಮಹತ್ವದ ಕೊಡುಗೆ ನೀಡುತ್ತಿರುವ ಅತಿಥಿ ಉಪನ್ಯಾಸಕರನ್ನು ಗೌರವದಿಂದ ಕಾಣಬೇಕೆಂದು ಅಖಿಲ ಭಾರತ ಯುವಜನ ಫೆಡರೇಷನ್ ರಾಜ್ಯ ಉಪಾಧ್ಯಕ್ಷ ಆವರಗೆರೆ ವಾಸು ಒತ್ತಾಯಿಸಿದ್ದಾರೆ.

ಅತಿಥಿ ಉಪನ್ಯಾಸಕರು ಅಲ್ಪ ಗೌರವ ಧನಕ್ಕೆ ಹಲವಾರು ವರ್ಷಗಳಿಂದ ದುಡಿಯುತ್ತಿದ್ದಾರೆ. ಪ್ರತಿ ವರ್ಷ ಗೌರವ ಧನ ಹೆಚ್ಚಳ ಸೇರಿದಂತೆ, ಸೇವಾ ಭದ್ರತೆಗಾಗಿ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿದ್ದಾರೆ, ಸರ್ಕಾರ ಈ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ವಿವಿಧ ರಾಜ್ಯಗಳಿಗೆ ಹೋಲಿಕೆ ಮಾಡಿಕೊಂಡರೆ ರಾಜ್ಯದಲ್ಲಿ ಅತಿಥಿ ಉಪನ್ಯಾಸಕರಿಗೆ ಅತ್ಯಂತ ಕಡಿಮೆ ಗೌರವ ಧನ ಕೊಡಲಾಗುತ್ತಿದೆ.

ಸರ್ಕಾರ ಸೇವಾ ಭದ್ರತೆಯನ್ನು ನೀಡಬೇಕು ಹಾಗೂ ಈ ಉಪನ್ಯಾಸಕರ ಗೌರವ ಧನವನ್ನು ಹೆಚ್ಚಿಸಬೇಕೆಂದು ಆವರಗೆರೆ ವಾಸು ಆಗ್ರಹಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಕೆರನಹಳ್ಳಿ ರಾಜು, ಜಿಲ್ಲಾ ಕಾರ್ಯದರ್ಶಿ ಎ. ತಿಪ್ಪೇಶಿ, ಉಪಾಧ್ಯಕ್ಷರಾದ ನಿಟ್ಟುವಳ್ಳಿ ಜೀವನ್, ಫಜಲುಲ್ಲಾ, ಇರ್ಫಾನ್, ಮಂಜುನಾಥ, ಮಳಲ್ಕೆರೆ ರುದ್ರೇಶ್, ಮಳಲ್ಕೆರೆ ಗುರುಮೂರ್ತಿ, ಸಿ. ಪರಶುರಾಮ್ ಗುದ್ದಾಲ್, ಮಧು, ಮಂಜುನಾಥ ಓಬಳಾಪುರ, ಹನುಮಂತ ನಿಟ್ಟುವಳ್ಳಿ, ಎ.ಕೆ.ಮಂಜುನಾಥ ಮಾರ್ಕೆಟ್, ಉಮೇಶ್ ಭಾರತ್ ಕಾಲೋನಿ, ಮಂಜು ನಾಥ ಹಳೇ ಚಿಕ್ಕನಹಳ್ಳಿ ಮಂಜುನಾಥ್ ಹೆಚ್.ಎಂ. ಮಂಜುನಾಥ್ ದೊಡ್ಡಮನಿ, ಸಂತೋಷ್, ಅಫ್ರೋಜ್ ಉಪಸ್ಥಿತರಿದ್ದರು.

# ಬಸವ ಸ್ಮರಣೆಯಲ್ಲಿಯೇ ಸಾತ್ವಿಕ ಬದುಕು ಸಾಗಿಸಿದ ಹೆಚ್.ಎಂ. ಸ್ವಾಮಿ



ದಾವಣಗೆರೆ, ಜ.2- ಬಸವ ಸ್ಮರಣೆಯಲ್ಲಿಯೇ ಸಾತ್ವಿಕ ಬದುಕನ್ನು ಕಟ್ಟಿಕೊಂಡಿದ್ದ ಲಿಂ.ಹೆಚ್.ಎಂ. ಸ್ವಾಮಿಯವರು ಗುರು - ಹಿರಿಯರ ಬಗ್ಗೆ ಅಪಾರವಾದ ಭಕ್ತಿ-ಭಾವ ಹೊಂದಿದ್ದರು ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ನುಡಿದರು.

ನಗರದ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿಯವರ ಹಿರೇಮಠದಲ್ಲಿ ಬಸವ ಬಳಗದ ಗೌರವಾಧ್ಯಕ್ಷರೂ, ಕೈಗಾರಿಕೋದ್ಯಮಿಗಳೂ, ಸಮಾಜ ಸೇವಕರಾಗಿದ್ದ ಲಿಂ. ಹೆಚ್.ಎಂ. ಸ್ವಾಮಿಯವರ ಪುಣ್ಯಸ್ಮರಣೆ ಹಾಗೂ 'ಸದ್ಭಾವದ ಸೊಡರು' ಕೃತಿ ಬಿಡುಗಡೆ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ನಡೆ-ನುಡಿ ಒಂದಾಗಿಸಿಕೊಂಡು ತಮ್ಮ ಬದುಕಿನಲ್ಲಿ ಬಸವ ಸ್ಮರಣೆ ಮಾಡಿಕೊಂಡು ಬದುಕು ಸವೆಸಿದವರು ಎಂದು ಸ್ವಾಮಿಯವರ ಸಮಾಜ ಸೇವೆಯನ್ನು ಗುಣಗಾನ ಮಾಡಿದರು.

ಬೆಂಗಳೂರು ಬೇಲಿಮಠದ ಶ್ರೀ ಶಿವಾನುಭವ ಚರಮೂರ್ತಿ ಶ್ರೀ ಶಿವರುದ್ರ ಮಹಾಸ್ವಾಮಿಗಳು ಮಾತನಾಡಿ, ಬಸವಣ್ಣನವರು ವೈಚಾರಿಕತೆಯ ತಳಹದಿಯ ಮೇಲೆ ರೂಪಿಸಿಕೊಟ್ಟ ಲಿಂಗವಂತ ಧರ್ಮದ ಆಚಾರ, ವಿಚಾರ, ನಂಬಿಕೆ, ಸಿದ್ಧಾಂತಗಳನ್ನು ಮೈಗೂಡಿಸಿಕೊಂಡಿದ್ದ ಹೆಚ್.ಎಂ. ಸ್ವಾಮಿಯವರು ನಡೆ ನುಡಿಗಳಲ್ಲಿ ಆಚರಣೆಗೆ ತಂದರು ಎಂದು ಹೇಳಿದರು.

ಬಸವ ಬಳಗದ ವಿ. ಸಿದ್ಧರಾಮ ಶರಣರು ಮಾತನಾಡಿ, ಶರಣರ ಕಾಯಕ ತತ್ವಕ್ಕೆ ಬದ್ಧರಾಗಿ ತಮ್ಮ ಕಾಯವನ್ನು ಬಸವಾದಿ ಪ್ರಮಥರ ಮಾರ್ಗದರ್ಶನದಲ್ಲಿ ದುಡಿಸಿಕೊಂಡ ಸ್ವಾಮಿಯವರು ಬಸವ ಬೆಳಗನ್ನು ಪ್ರತಿ ಹಳ್ಳಿಗಳಿಗೂ ತೆಗೆದುಕೊಂಡು ಹೋಗಿ ಜನರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ಮಾಡಿದ್ದರು ಎಂದರು.

ಇದೇ ವೇಳೆ ಬೆಂಗಳೂರು ಬಸವ ಸಮಿತಿ ಅಧ್ಯಕ್ಷರಾದ ಅರವಿಂದ ಜತ್ತಿ ಅವರು ಹೆಚ್.ಎಂ. ಸ್ವಾಮಿಯವರ ಜೀವನ ಸಾಧನೆ ಕುರಿತ ' ಸದ್ಭಾವದ ಸೊಡರು' ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

ಶಿರೋಳ ವಿಜಯ ಮಹಾಂತೇಶ ಮಠದ ಶ್ರೀ ಬಸವಲಿಂಗ ಸ್ವಾಮೀಜಿ, ಬೆಳಗಾವಿಯ ಬಸವ ತತ್ವ ಅನುಭಾವ ಕೇಂದ್ರದ ಮಾತೆ ವಾಗ್ದೇವಿ ತಾಯಿ, ಮಾತೆ ಕುಮುದಿನಿ ತಾಯಿ, ಬಸವ ತತ್ವ ಪ್ರಚಾರಕ ಜಿ.ಎನ್. ಬಸವರಾಜಪ್ಪ, ಅಜ್ಜಂಪುರ ಸೇವಾ ಟ್ರಸ್ಟ್ ಕಾರ್ಯಾಧ್ಯಕ್ಷರಾದ ಅಜ್ಜಂಪುರ ಶೆಟ್ರು ಶಂಭುಲಿಂಗಪ್ಪ, ಮಂದಾಕಿನಿ ತಾಯಿ, ಪ್ರಾಧ್ಯಾಪಕಿ ಡಾ. ಗೀತಾ ಬಸವರಾಜ್, ಹುಚ್ಚಪ್ಪ ಮಾಸ್ತರ್ ಮತ್ತಿತರರಿದ್ದರು.

ಬಸವ ಬಳಗದ ಶರಣೆಯರು ವಚನ ಗೀತೆ ಹಾಡಿದರು. ಶಿಲ್ಪಾ ಹಿರೇಮಠ್ ಸ್ವಾಗತಿಸಿದರು. ಶೃತಿ ನಿರೂಪಿಸಿದರು.

# ಎಲ್ಲಾ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ನೀಡಬೇಕು

## ಹರಪನಹಳ್ಳಿ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಯು. ಬಸವರಾಜಪ್ಪ ಅಧಿಕಾರ ಸ್ವೀಕಾರ



ಹರಪನಹಳ್ಳಿ, ಜ. 1- ಅರ್ಹ ವಯಸ್ಸಿನ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗಬೇಕು. ದಾಖಲಾದ ಎಲ್ಲಾ ಮಕ್ಕಳು ನಿರಂತರವಾಗಿ ಶಾಲೆಗೆ ಹಾಜರಾಗಬೇಕು. ಹಾಜರಾದ ಎಲ್ಲಾ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಕಲಿಕೆಯಾಗಬೇಕು ಎಂದು ನೂತನ ಕ್ಷೇತ್ರ ಶಿಕ್ಷಣಾಧಿಕಾರಿ ಯು. ಬಸವರಾಜಪ್ಪ ಹೇಳಿದರು.

ಹರಪನಹಳ್ಳಿ ತಾಲ್ಲೂಕಿಗೆ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಆಗಮಿಸಿ, ಬುಧವಾರ ಅಧಿಕಾರ ಸ್ವೀಕರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 1 ರಿಂದ 10ನೇ ತರಗತಿ ಮಕ್ಕಳ ಗುಣಮಟ್ಟದ ಶಿಕ್ಷಣದ ಕಡೆ ಗಮನ ನೀಡುತ್ತೇನೆ. ವಿಜಯನಗರ ಜಿಲ್ಲೆಯಲ್ಲಿ ಹರಪನಹಳ್ಳಿ ತಾಲ್ಲೂಕು ಉತ್ತಮ ಶೈಕ್ಷಣಿಕ ಬ್ಲಾಕ್ ಆಗಿ ಹೊರ ಹೊಮ್ಮಿದೆ ಎಂದು ಅಂಕಿ-ಅಂಶಗಳಿಂದ ತಿಳಿದು ಬಂದಿದೆ ಎಂದರು.

ಅಧಿಕಾರ ವಹಿಸಿಕೊಂಡ ಬಿಇಓ ಬಸವರಾಜಪ್ಪ ಅವರನ್ನು ಶಿಕ್ಷಕರ ಸಂಘ, ನೌಕರರ ಸಂಘಗಳ ಪದಾಧಿಕಾರಿಗಳು, ಸಿಬ್ಬಂದಿ ವರ್ಗದವರು ಸನ್ಮಾನಿಸಿ, ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವಿಜಯನಗರ ಜಿಲ್ಲಾಧ್ಯಕ್ಷ ಬಸವರಾಜಪ್ಪ ಸಂಗಪ್ಪನವರ, ಕ್ಷೇತ್ರ ಸಮನ್ವಯಾಧಿಕಾರಿ ಹುಸೇನ್ ಪೀರ್, ದೈಹಿಕ ಪರಿವೀಕ್ಷಕ ರೇವಣ್ಣ, ಇಸಿಓ ಗಿರಜ್ಜಿ ಮಂಜುನಾಥ, ಬಿಆರ್‌ಪಿ ನಾಗರಾಜ, ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷೆ ಜಿ. ಪದ್ಮಲತಾ, ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಸಿದ್ಧಲಿಂಗನಗೌಡ, ಶಿಕ್ಷಕರ ಸಂಘದ ತಾಲ್ಲೂಕು ಅಧ್ಯಕ್ಷ ಕಲಿವೀರ ಕಳ್ಳಿಮನಿ, ಕಾರ್ಯದರ್ಶಿ ಎಎಸ್‌ಎಂ ಗುರುಪ್ರಸಾದ್, ಶಿಕ್ಷಕರ ಪತ್ತಿನ ಬ್ಯಾಂಕ್ ಅಧ್ಯಕ್ಷ ಮಂಜುನಾಥ, ಶಿಕ್ಷಕರುಗಳಾದ ದೇವೇಂದ್ರಗೌಡ, ನೀಲಗುಂದ ಕೊಟ್ರೇಶ, ಕಾಟಿ ಹನುಮಂತಪ್ಪ, ಕೊಟ್ರೇಶ, ಸಿದ್ದೇಶ, ವಿಜಯಕುಮಾರ್ ಉಪಸ್ಥಿತರಿದ್ದರು.

# ವೀರ ಗಂಗಾಧರ ಶ್ರೀ ಪುಣ್ಯಸ್ಮರಣೆ ಇಂದು


ಆವರಗೊಳ್ಳದಲ್ಲಿ ಶ್ರೀ ಲಿಂ. ಜಗದ್ಗುರು ವೀರಗಂಗಾಧರ ಶಿವಾಚಾರ್ಯ ಸ್ವಾಮೀಜಿ ಪುಣ್ಯಸ್ಮರಣೆ ಇಂದು ನಡೆಯುವುದು. ಬ್ರಾಹ್ಮೀ ಮುಹೂರ್ತದಲ್ಲಿ "ಶ್ರೀ ವಿಷಮರ್ಧನ ಸಂಜೀವಿನಿ" ಗದ್ದುಗೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯರಿಗೆ ಏಕಾದಶ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ವಿಶೇಷ ಪೂಜೆಗಳು ನಡೆಯಲಿವೆ.

ಪ್ರಾತಃಕಾಲ 5ಕ್ಕೆ ರಾಮಘಟ್ಟ ಪೂಜ್ಯರ ಅಮೃತಹಸ್ತದಿಂದ ಸಾಮೂಹಿಕ ಶಿವದೀಕ್ಷೆ ನಡೆಯುವುದು. ಬೆಳಿಗ್ಗೆ 9 ಗಂಟೆಗೆ ಲಿಂ. ರಂಭಾಪುರಿ ಜಗದ್ಗುರುಗಳ ಭಾವಚಿತ್ರದ 'ಅಡ್ಡಪಲ್ಲಕ್ಕಿ ಮಹೋತ್ಸವ' ಸಕಲವಾದ್ಯ ವೈಭವದಿಂದ ಜರುಗುವುದು ಹಾಗೂ ಸೇವಾರ್ಥಿಗಳಿಗೆ ಪೂಜ್ಯರಿಂದ ಆಶೀರ್ವಾದ ಗುರುರಕ್ಷೆ ನಡೆಯುವುದು. ನಂತರ ಮಹಾಪ್ರಸಾದ ನಡೆದು ಮಂಗಲವಾಗುವುದು.

# ನಗರದಲ್ಲಿಂದು ಶರಣ ಸಂಗಮ

ಬಸವ ಕೇಂದ್ರ, ವಿರಕ್ತಮಠ, ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ಆಶ್ರಯದ ವತಿಯಿಂದ ನಗರದ ಜಯದೇವ ವೃತ್ತದಲ್ಲಿರುವ ಶ್ರೀ ಶಿವಯೋಗಾಶ್ರಮದಲ್ಲಿ ಇಂದು ಸಂಜೆ 6.30 ಕ್ಕೆ ಶರಣ ಸಂಗಮ ಹಮ್ಮಿಕೊಳ್ಳಲಾಗಿದೆ. ಅಧ್ಯಕ್ಷತೆಯನ್ನು ಚಿತ್ರದುರ್ಗ ಬೃಹನ್ಮಠದ ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ಚಿತ್ರದುರ್ಗ ಇವರು ವಹಿಸುವರು. ಶ್ರೀ ಬಸವಪ್ರಭು ಸ್ವಾಮೀಜಿ ಸಮ್ಮುಖ ವಹಿಸುವರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಸುಜಾತ ಎಂ.ಜಿ., ಕೆ. ರಾಘವೇಂದ್ರ ನಾಯರಿ ಆಗಮಿಸುವರು. ಕಾರ್ಯಕ್ರಮದಲ್ಲಿ ಡಾ. ಎನ್.ಜೆ. ಶಿವಕುಮಾರ್ ಉಪನ್ಯಾಸ ನೀಡುವರು. ಬಸವ ಕಲಾಲೋಕದ ಕಲಾವಿದರಿಂದ ವಚನ ಸಂಗೀತ ನಡೆಯುವುದು.

# ನೂತನ ಸದಸ್ಯರಿಗೆ ಎದುರಾದ ನೀರಿನ ಸಮಸ್ಯೆ



**ಮಲೇಬೆನ್ನೂರು**

ಮಲೇಬೆನ್ನೂರು, ಜ.2- ಇಲ್ಲಿನ ಪುರಸಭೆ ಚುನಾವಣೆಯಲ್ಲಿ ಆಯ್ಕೆಯಾಗಿರುವ ನೂತನ ಸದಸ್ಯರಿಗೆ ವಾರ್ಡಿನಲ್ಲಿ ಕುಡಿಯುವ ನೀರಿವ ಸಮಸ್ಯೆ ಸವಾಲ್ ಆಗಿ ಎದುರಾಗಿದ್ದು, ಕೆಲವು ಸದಸ್ಯರು ಟ್ಯಾಂಕ್ ಮೂಲಕ ನೀರು ಪೂರೈಕೆ ಮಾಡಲು ಮುಂದಾಗಿದ್ದಾರೆ.

ಪಟ್ಟಣದ 15ನೇ ವಾರ್ಡ್‌ನಲ್ಲಿ ಪುರಸಭೆಯಿಂದ ನೀರು ಪೂರೈಸುವ ಬೋರ್‌ವೆಲ್‌ಗಳು ಸುಟ್ಟು ಹೋಗಿರುವುದರಿಂದ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದೆ. ಈ ಬಗ್ಗೆ ಅಧಿಕಾರಿಗಳಿಗೆ ತಿಳಿಸಿದಾಗ ಕಾರಣ ಹೇಳಿದ್ದರಿಂದ ನಾವೇ ನಮ್ಮ ಸ್ವಂತ ಹಣದಲ್ಲಿ ವಾರ್ಡ್‌ನ ಜನರಿಗೆ ಟ್ಯಾಂಕರ್ ಮೂಲಕ ನೀರು ಪೂರೈಸುತ್ತಿದ್ದೇವೆ ಎಂದು ವಾರ್ಡಿನ ಸದಸ್ಯೆ ಶ್ರೀಮತಿ ನಿಗೀನಾ ಬಾನು ಅನ್ವರ್ ಬಾಷಾ ಅವರು ಜನತಾವಾಣಿಗೆ ತಿಳಿಸಿದರು. ವಾರ್ಡ್‌ನಲ್ಲಿ ಜನ ನಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಅವರ ಸೇವೆ ಮಾಡುವ ಜವಾಬ್ದಾರಿ ನಮ್ಮ ಮೇಲೆ ಹೆಚ್ಚಿರುವುದರಿಂದ ನೀರು ಪೂರೈಕೆಗೆ ಮುಂದಾಗಿದ್ದೇವೆ ಎಂದರು.

ಅಲ್ಲದೇ 2ನೇ ವಾರ್ಡಿನಲ್ಲೂ ಕಳೆದ ವರ್ಷದಿಂದಲೂ ನೀರಿನ ಸಮಸ್ಯೆ ಇದ್ದು, ಅದು ಈಗ ಮತ್ತಷ್ಟು ಹೆಚ್ಚಾಗಿದೆ. ಇಲ್ಲಿಂದ ಆಯ್ಕೆಯಾಗಿರುವ ಶ್ರೀಮತಿ ಸಮಯ್ಯ ಬಾನು, ಎಂ.ಬಿ. ರುಸ್ತುಂ ಅವರು ಸಮಸ್ಯೆ ಕುರಿತು ಶಾಸಕ ರಾಮಪ್ಪ ಅವರ ಗಮನಕ್ಕೆ ತಂದಿದ್ದಾರೆ. ಜೊತೆಗೆ ವಾರ್ಡ್ ನಂ.16, 17,18 ಮತ್ತು 19 ರಲ್ಲೂ ಕುಡಿಯುವ ನೀರಿನ ಸಮಸ್ಯೆ ಇದ್ದು, ಸೋಮವಾರ ಪುರಸಭೆ ಎದುರು ಖಾಲಿ ಕೊಡಗಳೊಂದಿಗೆ ಪ್ರತಿಭಟನೆ ಮಾಡುವುದಾಗಿ 17ನೇ ವಾರ್ಡಿನ ಸದಸ್ಯೆ ಅಕ್ಕಮ್ಮ ಬಿ. ಸುರೇಶ್ ತಿಳಿಸಿದ್ದಾರೆ.

# ನಗರದ ಸುನೇಹಾ ಕಾಸಲ್ ಅವರಿಗೆ ನಾಲ್ಕು ಸ್ವರ್ಣ ಪದಕ




ದಾವಣಗೆರೆ, ಜ.2- ಹೈದರಾಬಾದ್‌ನಲ್ಲಿರುವ ಪ್ರತಿಷ್ಠಿತ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾನಿಲಯದ ಎನ್.ಎ.ಎಲ್. ಎಸ್.ಎ.ಆರ್. (ನ್ಯಾಷನಲ್ ಅಕಾಡೆಮಿ ಆಫ್ ಲೀಗಲ್ ಸ್ಟಡೀಸ್ ಅಂಡ್ ರೀಸರ್ಚ್) ಈ ಕೋರ್ಸ್‌ನ ಅಂತಿಮ ಪರೀಕ್ಷೆಯಲ್ಲಿ ನಗರದ ಸುನೇಹಾ ಕಾಸಲ್, ತನ್ನ ಅತ್ಯುತ್ತಮ ಶೈಕ್ಷಣಿಕ ಸಾಧನೆಗಾಗಿ ನಾಲ್ಕು ಸ್ವರ್ಣ ಪದಕಗಳನ್ನು ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ.

ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾದ ಎನ್.ವಿ. ರಮಣ ಅವರು ಈ ಪದಕಗಳನ್ನು ಈ ವಿದ್ಯಾರ್ಥಿನಿಗೆ ಪ್ರದಾನ ಮಾಡಿದರು. ಸುನೇಹಾ, ನಗರದ ಕಾಸಲ್ ಅರುಣ್‌ಕುಮಾರ್ ಮತ್ತು ಪದ್ಮಾ ಅರುಣ್‌ಕುಮಾರ್ ಅವರ ದ್ವಿತೀಯ ಪುತ್ರಿ. ತನ್ನ ಪದವಿಪೂರ್ವ ಹಂತದವರೆಗಿನ ಶಿಕ್ಷಣವನ್ನು ದಾವಣಗೆರೆಯಲ್ಲಿಯೇ ಪಡೆದಿದ್ದ ಈಕೆ, ರಾಷ್ಟ್ರಮಟ್ಟದ ಸ್ಪರ್ಧಾ ಪರೀಕ್ಷೆ ಕ್ಲ್ಯಾಟ್‌ನಲ್ಲಿ ಅತ್ಯುತ್ತಮ ಸಾಧನೆ ಮಾಡಿ, ಈ ವಿದ್ಯಾನಿಲಯದಲ್ಲಿ ಪ್ರವೇಶ ಪಡೆದಿದ್ದಳು.

ಅಂತರರಾಷ್ಟ್ರೀಯ ಮಾನ್ಯತೆ ಇರುವ ಈ ಕಾನೂನು ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಪಡೆಯುವುದೇ ಒಂದು ಸಾಧನೆ ಎಂದು ಪರಿಗಣಿಸಲಾಗುತ್ತಿದೆ. ಅಂತಹದರಲ್ಲಿ ಅಲ್ಲಿಯ ಅಂತಿಮ ಪರೀಕ್ಷೆಯಲ್ಲಿ ನಾಲ್ಕು ಸ್ವರ್ಣ ಪದಕಗಳನ್ನು ಪಡೆದಿರುವ ಇವರ ಸಾಧನೆಯ ಬಗ್ಗೆ ಶ್ರೀಮತಿ ಸುಜಾತಾ ಕೃಷ್ಣ, ಕಾಸಲ್ ರಾಧಾಕೃಷ್ಣ ಗುಪ್ತ ಮತ್ತು ಇಡೀ ಕಾಸಲ್ ಮನೆತನದವರು ಅಭಿನಂದಿಸಿದ್ದಾರೆ.

# ನಗರದ ಬಾಪೂಜಿ ಬಿ ಸ್ಕೂಲ್‌ನಲ್ಲಿ ಇಂದು ಕಾರ್ಯಾಗಾರ

ದಾವಣಗೆರೆ : ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಶನ್ ಆಶ್ರಯದಲ್ಲಿ ಇಂಪ್ಯಾಕ್ಟ್ ಅಂಡ್ ಇಂಪ್ಲಿಕೇಶನ್ಸ್ ಆಫ್ ಪ್ಯಾಂಡೇಮಿಕ್ ಆನ್ ಕಾಮರ್ಸ್, ಮ್ಯಾನೇಜ್‌ಮೆಂಟ್ ಅಂಡ್ ಇನ್ಫರ್ಮೇಶನ್ ಟೆಕ್ನಾಲಜಿ ಕುರಿತು ಒಂದು ದಿನದ ಕಾರ್ಯಾಗಾರ 'ಪ್ರಜ್ಞಾ' ವನ್ನು ಬಾಪೂಜಿ ಬಿ-ಸ್ಕೂಲ್‌ನ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಅಧ್ಯಕ್ಷತೆಯನ್ನು ಅಥಣಿ ಎಸ್. ವೀರಣ್ಣ ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ಆರ್. ಶಶಿಧರ್ ಅವರು ಆಗಮಿಸುವರು. ಕಾರ್ಯಕ್ರಮದಲ್ಲಿ ಡಾ. ಬಿ. ವೀರಪ್ಪ ಉಪಸ್ಥಿತರಿರುವರು.

# ಹರಿಹರ : ಮಕ್ಕಳ ಲಸಿಕೆಗೆ ಇಂದು ಶಾಸಕ ರಾಮಪ್ಪ ಚಾಲನೆ

ಹರಿಹರ : ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಆರೋಗ್ಯ ಇಲಾಖೆಯಿಂದ ನಗರದ ಡಿ.ಆರ್.ಎಂ. ಶಾಲಾವರಣದಲ್ಲಿ ಬೆಳಗ್ಗೆ 10.30 ಕ್ಕೆ 15 ವರ್ಷದಿಂದ 18 ವರ್ಷದ ಮಕ್ಕಳಿಗೆ ಲಸಿಕೆ ನೀಡುವ ಸಮಾರಂಭಕ್ಕೆ ಶಾಸಕ ಎಸ್.ರಾಮಪ್ಪ ಚಾಲನೆ ನೀಡಲಿ ದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ. ಸಿದ್ದಪ್ಪ ತಿಳಿಸಿದ್ದಾರೆ.

ಸರ್ಕಾರಿ, ಖಾಸಗಿ, ಅನುದಾನಿತ ಮತ್ತು ಅನುದಾನ ರಹಿತ ಸುಮಾರು 68 ಪ್ರೌಢಶಾಲೆಗಳ 7,406 ಮಕ್ಕಳಿಗೆ ಕೋವ್ಯಾಕ್ಸಿನ್ ಲಸಿಕೆ ನೀಡಲಾಗುವುದು ಎಂದವರು ಹೇಳಿದ್ದಾರೆ.

ಮುಖ್ಯ ಅತಿಥಿಗಳಾಗಿ ನಗರಸಭೆ ಅಧ್ಯಕ್ಷೆ ರತ್ನ ಡಿ ಉಜ್ಜೇಶ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪೌರಾಯುಕ್ತರಾದ ಎಸ್ ಲಕ್ಷ್ಮಿ, ಬಿ.ಇ.ಓ ಬಿ.ಎಸ್. ಸಿದ್ದಪ್ಪ, ಇ.ಓ ಗಂಗಾಧರನ್, ಆರೋಗ್ಯ ಇಲಾಖೆಯ ಡಾ ಚಂದ್ರಮೋಹನ್, ಸಿಪಿಐ ಸತೀಶ್ ಕುಮಾರ್ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ.


**ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ 1ನೇ ನ್ಯಾಯಾಲಯ. ದಾವಣಗೆರೆ**

**ಸಿ.ಆರ್.ಮಿಸ್ ನಂ. 1220/2021**

ಅರ್ಜಿದಾರರು: 1. **ಶ್ರೀಮತಿ ನಾಗರತ್ನಮ್ಮ ಕೋಂ ಲೇಟ್ ಡಾ.ರುದ್ರಪ್ಪ**, ವಯಸ್ಸು ಸುಮಾರು 65 ವರ್ಷ, ಮನೆಕೆಲಸ. 2. **ಡಾ.ರಾಜೇಶ್ವರಿ ಬಿನ್ ಲೇಟ್ ಡಾ.ರುದ್ರಪ್ಪ**, ವಯಸ್ಸು ಸುಮಾರು 45 ವರ್ಷ, ವೃತ್ತಿ ದಂತ ವೈದ್ಯರು. 3.**ಶ್ರೀಮತಿ ಕೋಮಲ ಬಿನ್ ಲೇಟ್ ಡಾ. ರುದ್ರಪ್ಪ**, ವಯಸ್ಸು 40 ವರ್ಷ, ಗೃಹಿಣಿ ಎಲ್ಲರ ವಾಸ: ಮನೆ ನಂ.3369/4, ಎಂಸಿಸಿ ಬಿ. ಬ್ಲಾಕ್, ದಾವಣಗೆರೆ. **ವಿರುದ್ಧ** ಎದುರುದಾರರು: ಜನನ ಮತ್ತು ಮರಣ ನೋಂದಣಾಧಿಕಾರಿಗಳು, ದಾವಣಗೆರೆ ಮಹಾನಗರ ಪಾಲಿಕೆ, ದಾವಣಗೆರೆ

**ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿದಾರರ ಪರ ನೀಡಲಾದ ಪ್ರಕಟಣಾ ನೋಟಿಸು**

ಮೇಲ್ಕಂಡ ಪ್ರಕರಣವನ್ನು ಅರ್ಜಿದಾರರು **ಶ್ರೀ ಧನ್ಯಕುಮಾರ ಬಿನ್ ಡಾ. ರುದ್ರಪ್ಪ** ಇವರು ದಿ. 09.10.2013 ರಲ್ಲಿ ಮರಣ ಹೊಂದಿದ್ದು, ಮರಣ ಪ್ರಮಾಣ ಪತ್ರವನ್ನು ಪಡೆಯಲು ಘನ ಸನ್ನಿಧಾನ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಬೇರೆ ಯಾರದಾದರೂ ತಕರಾರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ದಿ. 07.02.2022 ರಂದು ಬೆಳಿಗ್ಗೆ 11.00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಿಯಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕ ಪಕ್ಷೀಯವಾಗಿ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ: 01.01.2022 ರಂದು ಕೊಡಲ್ಪಟ್ಟಿದೆ.

**ಕೆ.ಜಿ. ವಸಂತ**
ಅರ್ಜಿದಾರರ ಪರ ವಕೀಲರು, ದಾವಣಗೆರೆ


ನ್ಯಾಯಾಲಯದ ಆದೇಶದ ಮೇರೆಗೆ,
**ಶಿರಸ್ತೇದಾರರು,**
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ 1ನೇ ನ್ಯಾಯಾಲಯ, ದಾವಣಗೆರೆ.



**ಹೃದಯಪೂರ್ವಕ ಅಭಿನಂದನೆಗಳು**



**ಸಾಹಿತ್ಯ ಕ್ಷೇತ್ರದ ಸೇವೆಗಾಗಿ**
**ದಾವಣಗೆರೆ ಮಹಾನಗರ ಪಾಲಿಕೆಯ**
**ಕರ್ನಾಟಕ ರಾಜ್ಯೋತ್ಸವ ಗೌರವ**
**ಪುರಸ್ಕಾರಕ್ಕೆ ಭಾಜನರಾಗಿರುವ**
**ಶ್ರೀಮತಿ ಮಂಜುಳ ಹಿರೇಮಠ**
ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ನಾಗನೂರು
ಅವರಿಗೆ ಅಭಿನಂದನೆಗಳು



**ಹೆಚ್. ಬಿ ಜಯಣ್ಣ.** ಎಸ್.ಬಿ.ಐ. ಮ್ಯಾನೇಜರ್, **ಪಿ.ಆರ್. ಪ್ರಭಾಕರ್** ಎಸ್.ಬಿ.ಐ. ಮ್ಯಾನೇಜರ್, **ಹೆಚ್. ಎಂ. ವೀರೇಶ್.** ಎಸ್.ಬಿ.ಐ. ಮ್ಯಾನೇಜರ್(ನಿ), **ಎಲ್ ದಯಾನಂದ.** ಹಿರಿಯ ವಕೀಲರು, **ಹೆಚ್.ಆರ್.ಸಾಂಬಶಿವಯ್ಯ.** ಮಾಲೀಕರು ಸ್ವಾಮಿ ಬಾರ್, **ಪಾಲಾಕ್ಷ ಇಂಗಳಗಿ,** ದಾರ ಆಯಿಲ್ ಡಿಸ್ಟ್ರಿಬ್ಯೂಟರ್ಸ್ **ಎಂ. ಬಿ. ಕೊಟ್ರೇಶ್,** ಬಾಪೂಜಿ ಬ್ಯಾಂಕ್. **ಬಿ ಎಸ್ ಮಂಜುನಾಥ್.** ಬಾಪೂಜಿ ಬ್ಯಾಂಕ್, **ಪ್ರೊ: ಎಂ ಹೆಚ್. ಪ್ರಸನ್ನ ರೆಡ್ಡಿ,** ಉಪನ್ಯಾಸಕರು. **ಪಿ ಡಿ. ಚಿದಾನಂದ,** ಕಿಶನ್ ಟೆಕ್ಸ್‌ಟೈಲ್, . **ಬಾದಾಮಿ ಜಯಣ್ಣ,** ಬಾದಾಮಿ ಫ್ಯಾಷನ್ಸ್, ಸಾಯಿ ಕ್ರಿಯೇಷನ್ಸ್. **ರುದ್ರೇಶ್. ವೈ** ಸಿಮೆಂಟ್ ವ್ಯಾಪಾರಿಗಳು. **ಚನ್ನವೀರಪ್ಪ,** ಶಿಲ್ಪ ಗ್ಯಾರೇಜ್. **ಕೊಟ್ರೇಶ್ ಎನ್. ಕೆ.,** ವೀಡಾಲ್ ಆಯಿಲ್ ಡಿಸ್ಟ್ರಿಬ್ಯೂಟರ್ಸ್. **ಪ್ರಭು ಸ್ವಾಮಿ.** ಎಲೆಕ್ಟ್ರಿಕಲ್ ಕಂಟ್ರ್ಯಾಕ್ಟ್, **ಶಾಮ್ ಪ್ರಕಾಶ್.** ಇಂಟೀರಿಯರ್, **ಶ್ರೀನಿವಾಸ್.** ಟೈಲ್ಸ್ ವರ್ತಕರು, **ಓ.ಆರ್. ಶಿವಕುಮಾರ್** ಟೈಲ್ಸ್ ವರ್ತಕರು, **ರವಿ** ರವಿ ಮೆಡಿಕಲ್, **ಮಹೇಶ್ ದಳವಾಯಿ** ಸ್ಯಾಂಡ್ ವರ್ತಕರು, **ರಾಜಣ್ಣ ತರಗಾರ್** ಮೇಸ್ತ್ರಿ, **ಸಲೀಂ** ಟೈಲ್ಸ್ ಮೇಸ್ತ್ರಿ, **ಟೈಲ್ಸ್ ಪ್ರಕಾಶ್ ಕಾಮನಬಿಲ್ಲು ಗ್ರೂಪ್** ದಾವಣಗೆರೆ, **ಫಾರ್ಚ್ಯೂನ್ ಗ್ರೂಪ್** ದಾವಣಗೆರೆ, **ಎಲ್.ಡಿ. ಗ್ರೂಪ್** ದಾವಣಗೆರೆ, **ಮನೋರಂಜನ್ ಗ್ರೂಪ್** ದಾವಣಗೆರೆ



|| ಶ್ರೀ ಗುರು ಸಿದ್ದಲಿಂಗಾಯ ನಮಃ ||



ಶ್ರೀ ಗುರು ಬಕ್ಕೇಶ್ವರ ಸ್ವಾಮಿಗಳು | ಲಿಂ|| ಹಾನಗಲ್ಲ ಕುಮಾರಸ್ವಾಮೀಜಿ | ಲಿಂ|| ಪಂ. ಪಂಚಾಕ್ಷರ ಗವಾಯಿಗಳು | ಮುಗಳಖೋಡದ ಶ್ರೀ ಯಲ್ಲಾಲಿಂಗೇಶ್ವರ ಮಹಾಸ್ವಾಮೀಜಿ | ಲಿಂ|| ಪಂ. ಪುಟ್ಟರಾಜ ಗವಾಯಿಗಳು | ಪರಮಪೂಜ್ಯ ಕಲ್ಲಯ್ಯಜ್ಜನವರು

ಸಿದ್ಧಶ್ರೀ ಡಾ. ಪಂ. ಪುಟ್ಟರಾಜ ಕವಿಕೃತ, ಗದಗ

**ಮುಗುಳಖೋಡದ ಶ್ರೀ ಶ್ರೀ ಶ್ರೀ ಯಲ್ಲಾಲಿಂಗೇಶ್ವರ ಘನ ಲೀಲಾಮೃತ ಪುರಾಣ ಪ್ರಾರಂಭೋತ್ಸವ ಆಹ್ವಾನ ಪತ್ರಿಕೆ**

**ಪರಮಪೂಜ್ಯ ಗಾನಯೋಗಿ, ಶಿವಯೋಗಿ, ಪದ್ಮಭೂಷಣ ಪುರಸ್ಕೃತರು**
**ಲಿಂ. ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳವರ ಕೃಪಾಶೀರ್ವಾದಗಳೊಂದಿಗೆ**

ದಿನಾಂಕ : 03.01.2022 ನೇ ಸೋಮವಾರ, ಸಮಯ : ಸಂಜೆ 6.30 ರಿಂದ 8.30 ರ ವರೆಗೆ
ಸ್ಥಳ : ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನದ ಆವರಣ
(ಶ್ರೀಮತಿ ಮಾಗಾನಹಳ್ಳಿ ಬಸಮ್ಮ ಬಸಪ್ಪ ಕಲ್ಯಾಣ ಮಂಟಪ), ಚೌಕಿಪೇಟೆ, ದಾವಣಗೆರೆ-577001

ದಿವ್ಯಸಾನ್ನಿಧ್ಯ : **ಪರಮಪೂಜ್ಯ ಶ್ರೀ ಷ.ಬ್ರ. ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿ**
ನೇತೃತ್ವ : **ಡಾ. ಪರಮಪೂಜ್ಯ ಶ್ರೀ ಕಲ್ಲಯ್ಯ ಅಜ್ಜನವರು**
ಅತಿಥಿಗಳು : ಸನ್ಮಾನ್ಯ ಶ್ರೀ ಅಥಣಿ ಎಸ್. ವೀರಣ್ಣನವರು, ಸನ್ಮಾನ್ಯ ಶ್ರೀ ಮಾಗಾನಹಳ್ಳಿ ಶಿವಾನಂದಪ್ಪನವರು, ಶ್ರೀ ಎಸ್.ಟಿ. ವೀರೇಶ್, ಶ್ರೀ ದೇವರಮನಿ ಶಿವಕುಮಾರ್, ಶ್ರೀ ಇ.ಎಂ. ಮಂಜುನಾಥ್

ಪುರಾಣ ಪ್ರವಚನಕಾರರು : ಪದ್ಮಭೂಷಣ ಪರಮಪೂಜ್ಯ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರ ಶಿಷ್ಯರಾದ
ಯುವ ಪ್ರವಚನ ಪ್ರವೀಣ ಶ್ರೀ ತೋಟೇಂದ್ರ ಶಾಸ್ತ್ರಿಗಳು, ಅಬ್ಬೆ, ತುಮಕೂರು
ಸಂಗೀತ ಸೇವೆ : ಶ್ರೀ ಶಿವಾನಂದ ಜಿ. ಮಂದೇವಾಲ, ಶ್ರೀ ವೀರೇಶ್ವರ ಪುಣ್ಯಾಶ್ರಮ, ಗದಗ
ತಬಲಾ ಸೇವೆ : ಶ್ರೀ ಬಸವರಾಜ ಹಜೇರಿ ಸಾ. ಚಲಗೇರಿ, ಶ್ರೀ ವೀರೇಶ್ವರ ಪುಣ್ಯಾಶ್ರಮ, ಗದಗ
ಸಭಾ ನಿರೂಪಣೆ : ಶ್ರೀ ಶಿವಬಸಯ್ಯ ಚಿರಂತಿಮಠ

**ಡಾ. ಪಂ. ಕಲ್ಲಯ್ಯ ಅಜ್ಜನವರಿಗೆ ತುಲಾಭಾರ, ಸೇವಾರ್ಥಿಗಳು :**

ಶ್ರೀಮತಿ ಪದಮ್ಮ ದಿ. ಪಿ. ನಾರಾಯಣಪ್ಪ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಶ್ರೀಮತಿ ಮಂಜುಳ, ಶ್ರೀ ಆರ್. ರಾಜಶೇಖರ್ ಮತ್ತು ಮಕ್ಕಳು, ಬೆಂಗಳೂರು., ಶ್ರೀ ಡಿ. ನಾಗರಾಜಪ್ಪ, ಬಾಳೆಕಾಯಿ ವ್ಯಾಪಾರಿಗಳು, ಶ್ರೀಮತಿ ಶಾರದಮ್ಮ ಮತ್ತು ಮಕ್ಕಳು, ಶ್ರೀಮತಿ ಮಮತ ಎಂ. (ಕವಿತ ಎಂ.), ಶ್ರೀ ಕೊಟ್ರೇಶ್ ಎನ್.ಎಂ. ಮಕ್ಕಳು ಶ್ರೀ ಹಾರನಹಳ್ಳಿ ವೀರಭದ್ರಪ್ಪ, ಶ್ರೀಮತಿ ಜಯಮ್ಮ ಮತ್ತು ಮಕ್ಕಳು.

**ಶಾಲು, ಮುತ್ತಿನಹಾರ ಸೇವಾರ್ಥಿಗಳು :**

ಶ್ರೀ ಟಿ.ಕೆ. ಕರಿಬಸಪ್ಪ, ಶ್ರೀಮತಿ ವಸಂತಮ್ಮ, ದಾವಣಗೆರೆ. ಲಿಂ. ರಾಮಣ್ಣ, ಸಂಕಮ್ಮ ಮತ್ತು ಮಕ್ಕಳು, ಕೆ.ಆರ್. ರಾಮು ಹಾರ್ಮೋನಿಯಂ, ದಾವಣಗೆರೆ, ಶ್ರೀಮತಿ ಗಿರಿಜಮ್ಮ ಶ್ರೀ ಶಿವಲಿಂಗಪ್ಪ, ಶಾಮನೂರು, ಶ್ರೀಮತಿ ವಿಜಯಲಕ್ಷ್ಮಿ ಶ್ರೀ ವೀರೇಂದ್ರ, ಶಾಮನೂರು., ಶ್ರೀಮತಿ ಸುಮಲತಾ ಆರ್. ರಾಜಗೋಪಾಲ್ ಉಡಪ
ಕಾಣಿಕೆ ಹುಂಡಿ ಸೇವೆ : ಶ್ರೀಮತಿ ಲಕ್ಷ್ಮಿದೇವಿ ಪೋಬ್ಬತಿ ವಿ. ಹೊನ್ನಪ್ಪ ಮತ್ತು ಮಕ್ಕಳು.

# ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿ ಶೀಘ್ರ ಉದ್ಘಾಟನೆಗೆ ಶಾಸಕ ರಾಮಚಂದ್ರ ಒತ್ತಾಯ



**ಜಗಳೂರು**

ಜಗಳೂರು, ಜ.2- ಇಂದು ಚಿತ್ರದುರ್ಗದ ಭದ್ರಾ ಮೇಲ್ದಂಡೆ ಕೇಂದ್ರ ಕಛೇರಿಯಲ್ಲಿ ಜಗಳೂರು ಸೇರಿದಂತೆ ಚಿತ್ರದುರ್ಗ ಜಿಲ್ಲೆಯ ವಿವಿಧ ತಾಲ್ಲೂಕುಗಳಿಗೆ ನೀರಾವರಿ ಕಲ್ಪಿಸುವ ಕಾಮಗಾರಿ ಪರಿಶೀಲನೆ ಬೃಹತ್ ಹಾಗೂ ಮಧ್ಯಮ ನೀರಾವರಿ ಸಚಿವ ಗೋವಿಂದ ಕಾರಜೋಳ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಸಭೆಯಲ್ಲಿ ಮಾತನಾಡಿದ ಜಗಳೂರಿನ ಶಾಸಕರು ಹಾಗೂ ಎಸ್ಟಿ ನಿಗಮದ ಅಧ್ಯಕ್ಷ ಎಸ್.ವಿ.ರಾಮಚಂದ್ರ, ಜಗಳೂರು ಕ್ಷೇತ್ರಕ್ಕೆ 45 ಸಾವಿರ ಎಕರೆ ಪ್ರದೇಶಕ್ಕೆ ಅಪ್ಪರ್ ಭದ್ರಾ ಯೋಜನೆಯಡಿ ನೀರಾವರಿ ಕಲ್ಪಿಸಲು ಈಗಾಗಲೇ 1338 ಕೋಟಿ ರೂ.ಗಳಿಗೆ ಕೇಂದ್ರದ ಜಲನೀತಿ ಯೋಜನೆಯಡಿ ಸೇರ್ಪಡೆಯಾಗಿ ಟೆಂಡರ್ ಕರೆಯಲಾಗಿದೆ. ಕಾಮಗಾರಿ ಪ್ರಾರಂಭಿಸಲು ಶೀಘ್ರವೇ ಕಾಮಗಾರಿ ಉದ್ಘಾಟನೆ ಮಾಡುವಂತೆ ಸಭೆಯಲ್ಲಿ ಒತ್ತಾಯಿಸಿದರು.

ಸಿಎಂ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಸಿಎಂ ಯಡಿಯೂರಪ್ಪ, ಸಚಿವ ಗೋವಿಂದ ಕಾರಜೋಳ ಅವರನ್ನು ಉದ್ಘಾಟನೆಗೆ ಆಗಮಿಸಬೇಕೆಂದು ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಚಿತ್ರದುರ್ಗದ ಶಾಸಕ ತಿಪ್ಪಾರೆಡ್ಡಿ, ಹೊಸದುರ್ಗ ಶಾಸಕ ಗೂಳಿಹಟ್ಟಿ ಶೇಖರ್ ಮತ್ತು ಹೊಳಲ್ಕೆರೆ ಶಾಸಕ ಚಂದ್ರಪ್ಪ ಸೇರಿದಂತೆ ನೀರಾವರಿ ಇಲಾಖೆ ಮುಖ್ಯ ಇಂಜಿನಿಯರ್ ರಾಘವನ್, ಅಧೀಕ್ಷಕ ಇಂಜಿನಿಯರ್‌ಗಳಾದ ಕೆ. ಎಂ.ಶಿವಪ್ರಕಾಶ್, ಹೆಚ್.ಎಫ್. ಲಂಬಾಣಿ, ಕಾರ್ಯಪಾಲಕ ಇಂಜಿನಿಯರ್‌ಗಳಾದ ಚಂದ್ರಮೌಳಿ, ಶ್ರೀಧರ್, ಸಹಾಯಕ ಇಂಜಿನಿಯರ್ ವೆಂಕಟೇಶ್, ಹರೀಶ್ ಮತ್ತಿತರರು ಹಾಜರಿದ್ದರು. ಸಭೆಯ ನಂತರ ಚಿತ್ರದುರ್ಗ ಶಾಖಾ ಕಾಲುವೆ ವೀಕ್ಷಣೆ ನಡೆಸಿದರು.

ಇದೇ ಸಂದರ್ಭದಲ್ಲಿ ಶಾಸಕ ಎಸ್.ವಿ.ರಾಮಚಂದ್ರ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರಿಗೆ ಸನ್ಮಾನಿಸಿ, ಗೌರವಿಸಿದರು.

# ಝಘಮಗಿಸುತ್ತಿದ್ದ ಎವಿಕೆ ರಸ್ತೆಯಲ್ಲಿ ಕಗ್ಗತ್ತಲು

## 1 ಕೋಟಿ ರೂ. ವೆಚ್ಚದಲ್ಲಿ ಅಳವಡಿಸಲಾಗಿದ್ದ ವಿದ್ಯುತ್ ದೀಪಗಳಿಗೆ ನಿರ್ವಹಣೆ ಕೊರತೆ



ದಾವಣಗೆರೆ, ಜ.2- ಇಡೀ ನಗರದ ರಸ್ತೆಗಳಲ್ಲಿ ಮಾದರಿ ರಸ್ತೆ ಎಂಬ ಹೆಗ್ಗಳಿಕೆ ಇದ್ದಿದ್ದು ಎವಿಕೆ ರಸ್ತೆಗೆ. ಅದಕ್ಕೆ ಕಾರಣ ಅಲ್ಲಿನ ಅಲಂಕಾರಿಕ ವಿದ್ಯುತ್ ದೀಪಗಳು. ರಾತ್ರಿ ಈ ರಸ್ತೆಯಲ್ಲೊಮ್ಮೆ ನಡೆಯುವುದೇ ಖುಷಿ ನೀಡುತ್ತಿತ್ತು. ನಗರದವರಷ್ಟೇ ಅಲ್ಲ, ಪರ ಊರಿನವರು ಈ ರಸ್ತೆ ನೋಡಿ ಹುಬ್ಬೇರಿಸುತ್ತಿದ್ದರು.

ಅಂತಹ ಖ್ಯಾತವೆತ್ತ ರಸ್ತೆ ಇದೀಗ ಕತ್ತಲಲ್ಲಿ ಮುಳುಗಿದಂತಾಗಿದೆ. 2016 ರಿಂದ ಝಗಮಗಿಸುತ್ತಿದ್ದ ವಿದ್ಯುತ್ ದೀಪಗಳು ತಮ್ಮನ್ನು ದುರಸ್ತಿ ಮಾಡುವವರೇ ದಿಕ್ಕಿಲ್ಲ ಎಂಬಂತೆ ಕಣ್ಣು ಮುಚ್ಚಿ ನಿಟ್ಟುಸಿರು ಬಿಡುತ್ತಿವೆ ಎಂಬ ಭಾಸ.

ಡಾ. ಶಾಮನೂರು ಶಿವಶಂಕರಪ್ಪ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ್ ಅವರುಗಳ ಆಡಳಿತಾವಧಿಯಲ್ಲಿ ಅಭಿವೃದ್ಧಿ ಪಡಿಸಿದ್ದ ಹಲವಾರು ರಸ್ತೆಗಳಲ್ಲಿ ಎವಿಕೆ ರಸ್ತೆಯೂ ಒಂದು. ಇದೇ ರಸ್ತೆಯಲ್ಲಿ 2016ರಲ್ಲಿ ಜೂನ್ 16ರಂದು ಡಾ. ಶಾಮನೂರು ಶಿವಶಂಕರಪ್ಪನವರ ಜನ್ಮದಿನದಂದೇ ಉದ್ಘಾಟಿಸಲಾಗಿತ್ತು.

ಅಂದಹಾಗೆ ಈ ರಸ್ತೆಗೆ ಬೆಳಕಿನ ಮೂಲಕ ಅಂದ ಹೆಚ್ಚಿಸುವ ಈ ವಿದ್ಯುತ್ ದೀಪಗಳಿಗೆ ಖರ್ಚಾಗಿದ್ದು ಸುಮಾರು 1 ಕೋಟಿ ರೂ.ಗಳಷ್ಟು. ಒಂದು ಬದಿಯ ದೊಡ್ಡ ಕಂಬದ ದೀಪಗಳಿಗೆ 73 ಲಕ್ಷ ಹಾಗೂ ಎದುರು ಬದಿಯ ಚಿಕ್ಕ ಕಂಬಗಳಿಗೆ 26 ಲಕ್ಷ ರೂ. ವೆಚ್ಚ ಮಾಡಲಾಗಿತ್ತು.

2016ರಿಂದ ಎರಡು ವರ್ಷಗಳ ಗುತ್ತಿಗೆದಾರರ ನಿರ್ವಹಣೆ ಕಾರ್ಯ ಮುಗಿದ ಮೇಲೆ ಮಹಾನಗರ ಪಾಲಿಕೆ ನಿರ್ವಹಣೆಯನ್ನು ವಹಿಸಿಕೊಳ್ಳಬೇಕಾಗಿತ್ತು. ಆದರೆ, ತಮಗಿನ್ನೂ ನಿರ್ವಹಣೆ ಹಸ್ತಾಂತರಿಸಲಾಗಿಲ್ಲ ಎಂಬ ಕಾರಣ ನೀಡಿರುವ ಪಾಲಿಕೆ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿದ್ದಾರೆ. ಆ ಮೂಲಕ ಕೋಟಿ ರೂ. ವೆಚ್ಚದ ವಿದ್ಯುತ್ ದೀಪಗಳನ್ನು ಹಾಳುಗೆಡವುತ್ತಿದ್ದಾರೆ ಎಂಬ ಆರೋಪ ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್ ಅವರದ್ದು.

ಈ ವಿದ್ಯುತ್ ದೀಪಗಳನ್ನು ದುರಸ್ತಿಗೊಳಿಸುವಂತೆ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮಹಾನಗರ ಪಾಲಿಕೆಗೆ ಸೂಚಿಸಿದ್ದರೂ ಪಾಲಿಕೆ ಮೌನವಹಿಸಿದೆ. ಇನ್ನಾದರೂ ದುರಸ್ತಿಗೊಳಿಸಿ ಎಂಬುದು ನಾಗರಾಜ್ ಅವರ ಆಶಯ.

ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿ ಅಂದ ಹೆಚ್ಚಿಸಿಕೊಂಡಿದ್ದ ರಸ್ತೆಯೊಂದು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಬಲಿಯಾಗಿ ಬಿಕೋ ಎನ್ನುತ್ತಿರುವಂತಾಗಿರುವುದು ನಗರದ ಜನತೆಯ ದುರ್ದೈವ ಎನ್ನಬಹುದೇನೋ.

# ಮಕ್ಕಳ ಲಸಿಕೆ ಬೆರೆಯುವುದನ್ನು ತಪ್ಪಿಸಬೇಕು : ಸಚಿವ ಮನ್‌ಸುಖ್

ನವದೆಹಲಿ, ಜ. 2 – ಹದಿನೈದರಿಂದ 18 ವರ್ಷದ ವಯೋಮಾನದವರಿಗೆ ನೀಡಲಾಗುವ ಕೊರೊನಾ ಲಸಿಕೆ ಇತರೆ ಲಸಿಕೆಗಳ ಜೊತೆ ಬೆರೆಯುವುದನ್ನು ತಪ್ಪಿಸಲು ಮಕ್ಕಳಿಗಾಗಿ ಪ್ರತ್ಯೇಕ ಲಸಿಕಾ ಕೇಂದ್ರ ತೆರೆಯುವಂತೆ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ರಾಜ್ಯಗಳಿಗೆ ತಿಳಿಸಿದ್ದಾರೆ.

ಜನವರಿ 3ರ ಸೋಮವಾರದಿಂದ 15-18 ವಯೋಮಾನದವರಿಗೆ ಲಸಿಕೆ ನೀಡುವ ಪ್ರಕ್ರಿಯೆ ಆರಂಭವಾಗಲಿದೆ. ಈ ವಯೋಮಾನವದರಿಗೆ ಕೇವಲ ಕೊವ್ಯಾಕ್ಸಿನ್ ಲಸಿಕೆ ಲಭ್ಯವಿದೆ.

ಲಸಿಕೆ ನೀಡುವ ಕುರಿತು ಆನ್‌ಲೈನ್ ಮೂಲಕ ರಾಜ್ಯಗಳ ಅಧಿಕಾರಿಗಳ ಜೊತೆ ಚರ್ಚಿಸಿರುವ ಮಾಂಡವೀಯ, ಒಂದೇ ಕಡೆಯಲ್ಲಿ ಹಿರಿಯರು ಹಾಗೂ ಮಕ್ಕಳಿಗೆ ಲಸಿಕೆ ನೀಡುವ ಸಂದರ್ಭ ಬಂದರೆ, ಮಕ್ಕಳಿಗೆ ಲಸಿಕೆ ನೀಡಲು ಪ್ರತ್ಯೇಕ ತಂಡ ರೂಪಿಸಬೇಕು ಎಂದು ತಿಳಿಸಿದ್ದಾರೆ.

ರಾಜ್ಯಗಳು ತಮಗೆ ಅಗತ್ಯವಾದ ಲಸಿಕೆ ಕುರಿತು ಜಿಲ್ಲಾವಾರು ಅಂದಾಜಿನ ಮಾಹಿತಿ ನೀಡಬೇಕು. ಮುಂಚೂಣಿಯಾಗಿ ಮಕ್ಕಳಿಗೆ ಲಸಿಕೆ ನೀಡುವ ಕುರಿತು ಯೋಜನೆ ರೂಪಿಸಬೇಕು ಎಂದವರು ಹೇಳಿದ್ದಾರೆ.

ಓಮಿಕ್ರಾನ್ ಕಾರಣದಿಂದಾಗಿ ಬೇರೆ ದೇಶಗಳಲ್ಲಿ ಹಿಂದಿನ ಅಲೆಗಳ ಎರಡು - ಮೂರು ಪಟ್ಟು ಹೆಚ್ಚು ಪ್ರಕರಣಗಳು ಕಂಡು ಬಂದಿವೆ. ಭಾರತದಲ್ಲೂ ಸಹ ಕೊರೊನಾ ಅಲೆಯಿಂದಾಗಿ ಆರೋಗ್ಯ ವ್ಯವಸ್ಥೆ ಮೇಲೆ ಒತ್ತಡ ಬೀಳಬಹುದು. ರಾಜ್ಯಗಳು ಆರೋಗ್ಯ ಸೌಲಭ್ಯ ಹೆಚ್ಚಿಸಲು ಎಲ್ಲಾ ಕ್ರಮ ತೆಗೆದುಕೊಳ್ಳಬೇಕು ಎಂದು ಮಾಂಡವೀಯ ಹೇಳಿದ್ದಾರೆ.

## ರಜತ್ ಭಟ್ ಆಯ್ಕೆ



ದಾವಣಗೆರೆ, ಜ.2- ನಾಳೆ ದಿನಾಂಕ 3 ರಿಂದ 6ರವರೆಗೆ ನಡೆಯಲಿರುವ ಸೌತ್ ಜೋನ್ ಇಂಟರ್ ಯೂನಿವರ್ಸಿಟಿ ಟೇಬಲ್ ಟೆನ್ನಿಸ್ ಪುರುಷರ ಪಂದ್ಯಾವಳಿಗಳಿಗೆ ನಗರದ ಎಜಿಬಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ರಜತ್ ಭಟ್ ಆಯ್ಕೆಯಾಗಿದ್ದಾರೆ.

# ವಿಶ್ವ ಕನ್ನಡ ಸಮ್ಮೇಳನ ನಡೆಯುವಂತಾಗಲಿ



(1ನೇ ಪುಟದಿಂದ) ಸ್ವೀಕರಿಸಿದ್ದಾರೆ. ಕರ್ನಾಟಕದಲ್ಲಿ ನೆಲೆಸಿರುವ ಎಲ್ಲರನ್ನೂ ಕನ್ನಡಿಗರೆಂದು ಭಾವಿಸಿದ್ದಾರೆ ಎಂದವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಮಾಜ ಸೇವೆಯೂ ದೇವರ ಪೂಜೆಯಂತೆ. ಸಮಾಜ ಸೇವೆಯಿಂದ ಆನಂದ ಸಿಗುತ್ತದೆ. ಚಿತ್ರನಟ ಪುನೀತ್ ಅವರು ಬದುಕಿರುವಷ್ಟು ಕಾಲ ಬೇರೆಯವರಿಗೆ ಗೊತ್ತಾಗದಂತೆ ಪುಣ್ಯದ ಕೆಲಸ ಮಾಡಿದ್ದರಿಂದ ಅವರಿಗೆ ಸತ್ಕೀರ್ತಿ ದೊರೆತಿದೆ ಎಂದು ಶ್ರೀಗಳು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಗಳೂರು ಶಾಸಕ ಹಾಗೂ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ವಿ. ರಾಮಚಂದ್ರಪ್ಪ, ಮುಂದಿನ ದಿನಗಳಲ್ಲಿ ಜಗಳೂರಿನಂತಹ ಸಣ್ಣ ಊರುಗಳಲ್ಲೂ ಸಹ ಈ ರೀತಿಯ ಕನ್ನಡ ರಾಜ್ಯೋತ್ಸವಗಳು ನಡೆಯಬೇಕಿದೆ. ಇದಕ್ಕೆ ತಮ್ಮ ಸಹಕಾರ ನೀಡುವುದಾಗಿ ಹೇಳಿದರು.

ಚಿತ್ರನಟ ಪುನೀತ್ ನಿಧನಕ್ಕೆ ಅಬಾಲ ವೃದ್ಧರಾಗಿ ಎಲ್ಲರೂ ಕಣ್ಣೀರು ಹಾಕಿದ್ದಾರೆ. ಅವರು ಇನ್ನಷ್ಟು ದಿನ ಕನ್ನಡ ಸೇವೆಗೆ ಬೇಕಿತ್ತು ಎಂದರು.

ಪಾಲಿಕೆ ಸದಸ್ಯ ಕೆ.ಎಂ. ವೀರೇಶ್ ಮಾತನಾಡಿ, ದಾವಣಗೆರೆಯಲ್ಲಿ ವಿಶ್ವ ಕನ್ನಡ ಸಮ್ಮೇಳನ ನೆರವೇರಬೇಕಿದೆ. ಇದಕ್ಕಾಗಿ ಸರ್ಕಾರ ಹಾಗೂ ಸಂಘಟನೆಗಳಷ್ಟೇ ಅಲ್ಲದೇ, ಎಲ್ಲರೂ ಕೈಜೋಡಿಸಬೇಕಿದೆ ಎಂದರು.

ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ಎಂ.ಎಸ್. ವಿಠಲ್, ದಲಿತ ಶೋಷಿತ ಸಮಾಜ ಸಂಘರ್ಷ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಗ್ಗೆರೆ ರಂಗಪ್ಪ ಮತ್ತಿತರರು ಮಾತನಾಡಿದರು.

ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಕೆ.ಜಿ.ಯಲ್ಲಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಪಾಲಿಕೆ ಸದಸ್ಯ ಮಂಜುನಾಯ್ಕ, ತಾಜ್ ಪ್ಯಾಲೇಸ್ ಮುಖ್ಯಸ್ಥ ದಾದಾಪೀರ್, ಲುಂಬಿನಿ ಪ್ಯಾರಾ ಮೆಡಿಕಲ್ ಕಾಲೇಜ್ ಕಾರ್ಯದರ್ಶಿ ಜಿ.ವಿ. ಗಂಗಾಧರ್ ಮತ್ತಿತರರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಎಂ. ಸೋಮಶೇಖರಪ್ಪ, ಮಹಾಂತೇಶ್ ಒಣರೊಟ್ಟಿ, ಜಿ.ರಂಗಸ್ವಾಮಿ, ಸಿ. ಆರ್. ನಸೀರ್ ಅಹ್ಮದ್, ಕೊಂಡಯ್ಯ, ಪರಮೇಶ್ವರಪ್ಪ ಕತ್ತಿಗೆ, ಚಂದ್ರಣ್ಣ, ಕೆ.ಎನ್. ಚನ್ನಬಸಪ್ಪ (ಶಂಭು), ಪುನೀತ್, ವಿಜಯ್ ಜಾಧವ್, ಬಿ. ಸಿಕಂದರ್, ಚನ್ನಬಸಪ್ಪ ಮಲ್ಲಶೆಟ್ಟಿಹಳ್ಳಿ, ಕೆ.ಎಂ. ಸಮೀರ್ ಖಾನ್ ಮತ್ತಿತರರನ್ನು ಸನ್ಮಾನಿಸಲಾಯಿತು.

ಸಂತೋಷ್ ದೊಡ್ಮನಿ ಮಾತನಾಡಿದರು. ಜ್ಯೋತಿ ಹಿರೇಮಠ್ ನಿರೂಪಿಸಿದರು.

# ಇಂದಿನಿಂದ 'ಯಲ್ಲಾಲಿಂಗೇಶ್ವರ ಮಹಾರಾಜರ' ಪುರಾಣ ಆರಂಭ

ದಾವಣಗೆರೆ ಚೌಕಿಪೇಟೆಯ ಶ್ರೀ ಬಕ್ಕೇಶ್ವರ ದೇವಸ್ಥಾನದ ಆವರಣದಲ್ಲಿ ಇಂದಿನಿಂದ ಒಂದು ತಿಂಗಳ ಕಾಲ ಶ್ರೀ ಶಿವಯೋಗೀಶ್ವರ ಭಜನಾ ಸಂಘದಿಂದ 'ಯಲ್ಲಾಲಿಂಗೇಶ್ವರ ಮಹಾರಾಜರ' ಪುರಾಣ ಪ್ರವಚನ ನಡೆಯಲಿದೆ.

ಪುಟ್ಟರಾಜ ಕವಿ ಗವಾಯಿಗಳವರ ಶಿಷ್ಯರಾದ ಮುಗಳಖೋಡದ ತೋಟೇಂದ್ರ ಶಾಸ್ತ್ರಿಗಳು ಪುರಾಣ ಪ್ರವಚನ ನಡೆಸಿಕೊಡಲಿದ್ದಾರೆ.

ಇಂದು ಸಂಜೆ 6.30 ಕ್ಕೆ ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ, ಶ್ರೀ ಕಲ್ಲಯ್ಯಜ್ಜನವರು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಕೈಗಾರಿಕೋದ್ಯಮಿ ಅಥಣಿ ಎಸ್. ವೀರಣ್ಣ, ಮಾಗಾನಹಳ್ಳಿ ಶಿವಾನಂದಪ್ಪ, ಮೇಯರ್ ಎಸ್.ಟಿ. ವೀರೇಶ್, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಜನತಾವಾಣಿ ಉಪ ಸಂಪಾದಕ ಇ.ಎಂ. ಮಂಜುನಾಥ್ ಭಾಗವಹಿಸಲಿದ್ದಾರೆ.

ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿಗಳಾದ ಶ್ರೀ ಕಲ್ಲಯ್ಯಜ್ಜನವರಿಗೆ ಈಗಾಗ 1614 ತುಲಾಭಾರ ಸೇವೆಗಳು ನಡೆದಿದ್ದು, ಇಂದು 6 ತುಲಾಭಾರಗಳು ನಡೆಯಲಿವೆ. ಒಟ್ಟು 1620 ತುಲಾಭಾರಗಳು ಇದುವರೆಗೂ ನಡೆದಿವೆ.

ಒಂದು ತಿಂಗಳ ಪರ್ಯಂತ ನಡೆಯುವ ಪುರಾಣ ಕಾರ್ಯಕ್ರಮದಲ್ಲಿ ನಗರದ ಸದ್ಭಕ್ತರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಅಜ್ಜಂಪುರ ಮುತ್ತಣ್ಣ, ಯತ್ನಳ್ಳಿ ರುದ್ರೇಶ್, ಬಸವರಾಜಪ್ಪ ಹಾಗೂ ಟಿ.ಕೆ. ಕರಿಬಸಪ್ಪ ಕೋರಿದ್ದಾರೆ.

# ಬಲ್ಲೂರಿನಲ್ಲಿ ಶ್ರೀ ಆಂಜನೇಯ ದೇವಸ್ಥಾನ ನಿರ್ಮಾಣಕ್ಕೆ ತೀರ್ಮಾನ

ದಾವಣಗೆರೆ, ಜ. 2- ತಾಲ್ಲೂಕಿನ ಬಲ್ಲೂರು ಗ್ರಾಮದಲ್ಲಿ ಶ್ರೀ ಆಂಜನೇಯ ದೇವರ ನೂತನ ದೇವಸ್ಥಾನ ನಿರ್ಮಿಸಲು ಗ್ರಾಮಸ್ಥರು ತೀರ್ಮಾನಿಸಿದ್ದಾರೆ. ಭಕ್ತಾದಿಗಳು ಶಕ್ತ್ಯಾನುಸಾರ ದೇವಸ್ಥಾನದ ಕಟ್ಟಡಕ್ಕೆ ಹಣ ಸಹಾಯ ನೀಡ ಬೇಕೆಂದು ಗ್ರಾಮಸ್ಥರ ಪರವಾಗಿ ದೇವಸ್ಥಾನ ಕಮಿಟಿಯ ಅಧ್ಯಕ್ಷ ಬಲ್ಲೂರು ರವಿಕುಮಾರ್ ತಿಳಿಸಿದ್ದಾರೆ. ಹಣ ಸಹಾಯ ಮಾಡುವವರು ಬ್ಯಾಂಕ್‌ನ ಕರೆಂಟ್ ಅಕೌಂಟ್ ನಂ. IFSC Code CNRB 0003842 A/c 120000 603 806

# ಮಕ್ಕಳ ಕಲಿಕೆಯ ಹೊಣೆಗಾರಿಕೆ ತಂದೆ - ತಾಯಿಗಳಿಬ್ಬರದು



## ವಿನೂತನ ಮಹಿಳಾ ಸಮಾಜದ ವಾರ್ಷಿಕೋತ್ಸವದ ಸಮಾರಂಭದಲ್ಲಿ ಪ್ರಾಧ್ಯಾಪಕ ಡಾ. ನವಿಲೇಹಾಳ್

ದಾವಣಗೆರೆ ಜ.2- ಪ್ರಸ್ತುತ ಮಕ್ಕಳಿಗೆ ವಿದ್ಯೆ ಕಲಿಸಬೇಕಾದ ಹೊಣೆಗಾರಿಕೆಯನ್ನು ತಾಯಿಯ ಜೊತೆಗೆ ತಂದೆಯೂ ಹೊರಬೇಕಾದ ಅನಿವಾರ್ಯತೆ ಇದೆ ಎಂದು ಪ್ರಾಧ್ಯಾಪಕ ಡಾ. ದಾದಾಪೀರ್ ನವಿಲೇಹಾಳ್ ಹೇಳಿದರು.

ನಗರದ ವಿನಾಯಕ ಬಡಾವಣೆ ವಿದ್ಯಾನಗರದ ವಿನಾಯಕ ದೇವಸ್ಥಾನದ ಆವರಣದಲ್ಲಿ ಏರ್ಪಡಿಸಿದ್ದ ವಿನೂತನ ಮಹಿಳಾ ಸಮಾಜದ 15 ನೇ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಭಾರತೀಯ ಸಮಾಜದಲ್ಲಿ ಮಹಿಳೆಯನ್ನು 2 ನೇ ದರ್ಜೆ ಪ್ರಜೆಯನ್ನಾಗಿ ನೋಡುವ ಹಾಗೂ ಹೆಣ್ಣನ್ನು ಅಕ್ಷರ ಸಂಸ್ಕೃತಿಯಿಂದ ದೂರ ಇಡಲಾಗಿತ್ತು. ಆದರೀಗ ಕಾಲ ಬದಲಾಗಿದೆ. ಮಹಿಳೆ ಸಬಲೆಯಾಗಿದ್ದು, ಸುಶಿಕ್ಷಿತಳಾಗಿ, ಎಲ್ಲಾ ಕ್ಷೇತ್ರಗಳಲ್ಲೂ ಪುರುಷನ ಸರಿ ಸಮನಾಗಿ ದುಡಿಯುತ್ತಿದ್ದಾಳೆ. ವಿದ್ಯೆ, ಪದವಿ ಪಡೆದ ಶಿಕ್ಷಣವಂತ ಮಹಿಳೆಯೇ ತನಗೆ ಹೆಣ್ಣು ಬೇಡವೆಂದು ಭ್ರೂಣ ಹತ್ಯೆಯಂತಹ ಕ್ರೌರ್ಯಕ್ಕೆ ಬಲಿಯಾಗುತ್ತಿರುವುದು ವಿಷಾದದ ಸಂಗತಿ ಎಂದರು.

ಮಕ್ಕಳಿಗೆ ಕೇವಲ ಓದು-ಬರಹವಿದ್ದರಷ್ಟೇ ಸಾಲದು, ನೈತಿಕ ಶಿಕ್ಷಣದ ಅವಶ್ಯವಿದೆ. ಅರಿವನ್ನು ಕಲಿಸಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಜೀವನ ಕ್ರಮ ಬದಲಾಗುತ್ತಿದ್ದು, ದ್ವಂದ್ವಗಳಲ್ಲಿ ಬದುಕುತ್ತಿದ್ದೇವೆ ಎಂದರು.

ಅನ್ಯಾಯಕ್ಕೊಳಗಾದವರ ಬಗ್ಗೆ ಕರುಣೆಯೂ ಇಲ್ಲ, ಅನ್ಯಾಯ ಮಾಡಿದವರ ಬಗ್ಗೆ ಸಿಟ್ಟು ಇಲ್ಲದಂತಾಗಿದೆ. ರೋಗಗ್ರಸ್ಥ ಧಾರಾವಾಹಿಗಳನ್ನು ನೋಡುವ ಬದಲು ವಿನೂತನ ಮಹಿಳಾ ಸಮಾಜ ಯೋಜಿಸುವ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತಮ್ಮ ಪ್ರತಿಭೆ ಅನಾವರಣಗೊಳಿಸುವ ಅವಶ್ಯವಿದೆ ಎಂದು ಕರೆ ನೀಡಿದರು.

ವಿನೂತನ ಮಹಿಳಾ ಸಮಾಜದ ಅಧ್ಯಕ್ಷೆ ರೇಖಾ ಓಂಕಾರಪ್ಪ ಅಧ್ಯಕ್ಷತೆ ವಹಿಸಿದ್ದರು. ಮಹಾನಗರ ಪಾಲಿಕೆ ಸದಸ್ಯೆ ವೀಣಾ ನಂಜಪ್ಪ, ವಿನಾಯಕ ಬಡಾವಣೆ ನಾಗರಿಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಯು. ಸದಾಶಿವಪ್ಪ ಉಪಸ್ಥಿತರಿದ್ದರು.

ನಾಡಗೀತೆ ಮತ್ತು ವಿನೂತನ ಮಹಿಳಾ ಸಮಾಜದ ಮಹಿಳೆಯರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಸಮಾಜದ ಕಾರ್ಯದರ್ಶಿ ಶೈಲಜಾ ತಿಮ್ಮೇಶ್ ನಿರೂಪಿಸಿದರು. ಚೇತನಾ ಮಂಜುನಾಥ್ ಸ್ವಾಗತಿಸಿದರು. ಸಾವಿತ್ರಿ ಗವಿಸಿದ್ದೇಶ್ವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸುಧಾ ಪಾಟೀಲ್ಮ ವಂದಿಸಿದರು.

ಮಮತಾ ಜಯಕುಮಾರ್, ಲೀಲಾ ಶೇಖರ್, ಮಂಜುಳಾ ನಾಗರಾಜ್, ಶಶಿ ಶಿವಯ್ಯ, ಲಲಿತಾ ಪಾಟೀಲ್ ಹಾಗೂ ಸರ್ವ ಸದಸ್ಯರು ಭಾಗವಹಿಸಿದ್ದರು.

ಇದೇ ವೇಳೆ ಜಿಲ್ಲಾ ರಾಜ್ಯೋತ್ಸವ ಪುರಸ್ಕಾರಕ್ಕೆ ಭಾಜನರಾಗಿದ್ದ ಅನಿತಾ ಹೊಸಗೌಡರ್ ಹಾಗೂ ವಿನೂನ ಮಹಿಳಾ ಸಮಾಜದ ಅಧ್ಯಕ್ಷರಾದ ರೇಖಾ ಓಂಕಾರಪ್ಪ ಅವರನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅವರು ರೇಖಾ ಓಂಕಾರಪ್ಪ ಅವರನ್ನು ಅಭಿನಂದಿಸಿದರು.

# ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಮನವಿ



ದಾವಣಗೆರೆ ಜ. 2- ಕೇಂದ್ರ ಸರ್ಕಾರಿ ನೌಕರರಿಗೆ ಹಾಗೂ ರಾಜ್ಯ ಸರ್ಕಾರಿ ನೌಕರರಿಗೂ ಸರಿಸಮನಾದ ವೇತನ ಹಾಗೂ ಭತ್ಯೆ, ಖಾಲಿ ಇರುವ 2.65 ಲಕ್ಷ ಹುದ್ದೆಗಳ ಭರ್ತಿ, ನೂತನ ಪಿಂಚಣಿ ಯೋಜನೆ ರದ್ದುಪಡಿಸುವುದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ವತಿಯಿಂದ ಶಾಸಕರುಗಳಾದ ಎಸ್.ಎ. ರವೀಂದ್ರನಾಥ್, ಪ್ರೊ ಎನ್. ಲಿಂಗಣ್ಣ ಹಾಗೂ ಡಾ. ಶಾಮನೂರು ಶಿವಶಂಕರಪ್ಪ ಅವರಿಗೆ ಮನವಿ ಸಲ್ಲಿಸಿ, ರಾಜ್ಯ ಸರ್ಕಾರಕ್ಕೆ ಹಾಗೂ ಮುಖ್ಯಮಂತ್ರಿಗಳ ಗಮನ ಸೆಳೆಯುವಂತೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ ಹಾಗೂ ಸಂಘದ ಪದಾಧಿಕಾರಿಗಳು, ನಿರ್ದೇಶಕರು ನಾಮನಿರ್ದೇಶಿತ ಸದಸ್ಯರು, ವೃತ್ತಿ ಸಂಘದ ಪದಾಧಿಕಾರಿಗಳು ಹಾಜರಿದ್ದರು.

# ಅಯ್ಯಪ್ಪ ಸ್ವಾಮಿ ಪಡಿ ಪೂಜೆ



ದಾವಣಗೆರೆ, ಜ.2- ವಿನೋಬನಗರದ 1ನೇ ಮೇನ್, 5ನೇ ಕ್ರಾಸ್‌ನಲ್ಲಿ ಅಯ್ಯಪ್ಪ ಸ್ವಾಮಿ ಭಕ್ತ ವೃಂದದ ವತಿಯಿಂದ 12ನೇ ವರ್ಷದ ಅಯ್ಯಪ್ಪ ಸ್ವಾಮಿ ಪಡಿ ಪೂಜಾ ಕಾರ್ಯ ಹಮ್ಮಿಕೊಳ್ಳಲಾಗಿತ್ತು.

ಪಾಲಿಕೆ ಸದಸ್ಯ ಎ.ನಾಗರಾಜ್, ಬಿಜೆಪಿ ಮುಖಂಡ ಶ್ರೀನಿವಾಸ ದಾಸಕರಿಯಪ್ಪ ಅವರ ಉಪಸ್ಥಿತಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು. ನಂತರ ಅನ್ನ ಸಂತರ್ಪಣೆ ನಡೆಯಿತು.

# ಸುಪ್ರೀಂನಲ್ಲಿ ಮತ್ತೆ ಆನ್‌ಲೈನ್ ವಿಚಾರಣೆ

ನವದೆಹಲಿ, ಜ. 2 – ದೇಶದಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ನಡುವೆಯೇ, ಸುಪ್ರೀಂ ಕೋರ್ಟ್ ಮತ್ತೆ ಆನ್‌ಲೈನ್ ವಿಚಾರಣೆಯ ಮೊರೆ ಹೋಗಿದೆ. ಮುಂದಿನ ಎರಡು ವಾರಗಳ ಕಾಲ ಕೇವಲ ಆನ್‌ಲೈನ್ ಮೂಲಕವೇ ವಿಚಾರಣೆ ನಡೆಯಲಿದೆ.ಸೋಮವಾರದಿಂದ ಖುದ್ದು ಹಾಜರಾತಿಯ ವಿಚಾರಣೆ ನಡೆಯುವುದಿಲ್ಲ. ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಆನ್‌ಲೈನ್ ಮೂಲಕವೇ ವಿಚಾರಣೆ ನಡೆಯಲಿದೆ ಎಂದು ಸುಪ್ರೀಂ ಕೋರ್ಟ್ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

**ಮಾಸ್ಕ್ ಬಳಸಿ ಓಮಿಕ್ರಾನ್ ತೊಲಗಿಸಿ**

**ಉತ್ತಮ ಗುಣಮಟ್ಟದ ಅಡಿಕೆ ಗೋಟು ಮತ್ತು ಸಸಿಗಳು ದೊರೆಯುತ್ತವೆ**

1 ಕೆಜಿ, 2 ಕೆಜಿ ಪ್ಯಾಕೆಟ್ - ದರ 25/- ರಿಂದ 30/- ರೂಪಾಯಿ
5 ಕೆಜಿ ಪ್ಯಾಕೆಟ್ ದರ 150/- ರಿಂದ 200/- ರೂಪಾಯಿ
**ಸ್ಥಳ : ಹೆಚ್. ಕಲಪನಹಳ್ಳಿ.**
**99456 43545**
**99015 58855**

ssims SPARSH CENTRE FOR ACCIDENTS BONE & JOINT CARE

**ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,**
**ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು**
**ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ**

| ಡಾ. ರವಿಕುಮಾರ್ ಮುಕಾರ್ತಿಹಾಳ್ | ಡಾ. ನವೀನ್ ತಹಶೀಲ್ದಾರ್ |
| --- | --- |
| D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany) ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು | MS(Ortho), AOA Fellow (Melbourne, Australia), Combined Neurosurgery & Orthopedic Spine Fellowship (Amrita Institute, Kochi) ಬೆನ್ನುಹುರಿ ಶಸ್ತ್ರಚಿಕಿತ್ಸಕರು |
| ದಿನಾಂಕ: ಗುರುವಾರ, 6 ಜನವರಿ 2022 | ದಿನಾಂಕ: ಗುರುವಾರ, 6 ಜನವರಿ 2022 |

ಸಮಯ: ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ

**ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002**

**ನೋಂದಣಿಗಾಗಿ ಕರೆಮಾಡಿ: 96869 29090**

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ(TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte